# ECHO OF HIS CALL

# ಕರೆಯ ಪ್ರತಿಧ್ವನಿ

**KANNADA**

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

**Editor : S. SAM SELVA RAJ** **16 Languages** **Associate Editor : Rev. R. Rama Krishna**

**Vol. XXVIII** **YEAR OF OUR LORD JESUS CHRIST, 2026 OCTOBER** **No.09**

## ಪರಿಶುದ್ಧ ಸತ್ಯವೇದ

ದಯವಮಾಡಿ ಈ ಕೆಳಗಿನ ವಚನಗಳನ್ನು **ಕಂಠಪಾಠ ಮಾಡಿರಿ.**

### ಯೋಹಾನ 1:1-10

1. ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು.
2. ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು.
3. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ.
4. ಆತನಲ್ಲಿ ಜೀವವಿತ್ತು; ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು.
5. ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ.
6. ದೇವರು ಕಳುಹಿಸಿದ ಒಬ್ಬ ಮನುಷ್ಯನು ಬಂದನು; ಅವನ ಹೆಸರು ಯೋಹಾನನು. ಈ ಯೋಹಾನನು ಸಾಕ್ಷಿಗಾಗಿ ಬಂದನು.
7. ತನ್ನ ಮೂಲಕವಾಗಿ ಎಲ್ಲರೂ ನಂಬುವಂತೆ ಅವನು ಆ ಬೆಳಕಿನ ವಿಷಯದಲ್ಲಿ ಸಾಕ್ಷಿ ಕೊಡುವುದಕ್ಕೆ ಬಂದನು.
8. ಅವನೇ ಆ ಬೆಳಕಲ್ಲ, ಆ ಬೆಳಕಿನ ವಿಷಯದಲ್ಲಿ ಸಾಕ್ಷಿ ಕೊಡುವುದಕ್ಕಾಗಿ ಬಂದವನು.
9. ನಿಜವಾದ ಬೆಳಕು ಲೋಕಕ್ಕೆ ಬರುವದಾಗಿತ್ತು ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದ್ದು.
10. ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು.

## ನೀವು ಪ್ರಕಾಶಿಸುವುದಕ್ಕಾಗಿ ಕರೆಯಲ್ಪಟ್ಟಿದ್ದೀರಿ!

## YOU ARE CALLED TO SHINE!

ಸಹೋದರಿ ಎಂಜೆಲಿನ್



ನನ್ನ ಆತ್ಮೀಯ ಆತನ ಕರೆಯ ಪ್ರತಿಧ್ವನಿಯ ಮುಂದುವರಿದ ಕುಟುಂಬಕ್ಕೆ ನಮ್ಮ ಕರ್ತನು ಮತ್ತು ರಕ್ಷಕನಾದ ಯೇಸುಕ್ರಿಸ್ತನ ಅಮೂಲ್ಯವಾದ ನಾಮದಲ್ಲಿ ನಿಮಗೆ ಶುಭಾಶಯಗಳು!

ಭಾರತದಲ್ಲಿ, ದೀಪಾವಳಿಯ ತಿಂಗಳು ಬಹಳ ವಿಶೇಷವಾದ ಸಮಯವಾಗಿದೆ. ಇಡೀ ರಾಷ್ಟ್ರದಲ್ಲಿ ಮತ್ತು ಪ್ರಪಂಚದಾದ್ಯಂತಹ ಕೋಟ್ಯಾನುಕೋಟಿ ಜನರು ದೀಪಗಳ ಹಬ್ಬವನ್ನು ಆಚರಿಸುತ್ತಾರೆ. ಈ ಆಚರಣೆಯು ಸಾಂಪ್ರದಾಯಿಕವಾಗಿ ಕತ್ತಲೆಯ ಮೇಲೆ ಬೆಳಕು ವಿಜಯವನ್ನು ಸಾಧಿಸಿದಂತಹದ್ದು.

ಪ್ರಪಂಚದಾದ್ಯಂತಹ ಭಾರತೀಯರು ದೀಪಾವಳಿಯನ್ನು ಆಚರಿಸುವುದನ್ನು ನಾನು ನೋಡುವಾಗಲೆಲ್ಲಾ ನನಗೆ ಯಾವುದೇ ಸಹಾಯ ಮಾಡುವುದಕ್ಕೆ ಆಗುವುದಿಲ್ಲ, ಆದರೆ ದೊಡ್ಡ ಬೆಳಕಿನ ಬಗ್ಗೆ ನಾನು ಆಲೋಚಿಸುವಾಗ ಲೋಕಕ್ಕೆ ಬೆಳಕು ನಮ್ಮ ಕರ್ತನಾದ ಯೇಸುಕ್ರಿಸ್ತನು ನಮ್ಮೊಳಗಿನ ಕತ್ತಲೆಗೆ ಆತನು ಪ್ರವೇಶಿಸಿ ನಮ್ಮ ಕಣ್ಣುಗಳನ್ನು ತೆರೆದನು. ನಿರೀಕ್ಷೆ ಇಲ್ಲದೆ ಇರುವಲ್ಲಿ ನಿರೀಕ್ಷೆಯನ್ನು ಎಚ್ಚರಿಸಿದನು. ಕತ್ತಲೆಯಿಂದ ನಮ್ಮನ್ನು ಕರೆದು ಅಗಮ್ಯವಾದ ಬೆಳಕಿನ ಕಡೆಗೆ ನಮ್ಮನ್ನು ನಡೆಸಿದ್ದಾನೆ.

(3ನೇ ಪುಟಕ್ಕೆ)

## ಆತನ ಕರೆಯ ಪ್ರತಿಧ್ವನಿ



**ಕ್ರಿಸ್ತೀಯ ಯುಟ್ಯೂಬ್ ಚಾನೆಲ್**
**ಪಾ.ಎಸ್.ಸ್ಯಾಮ್ ಸೆಲ್ವರಾಜ್**

ರವರಿಂದ ಪ್ರತಿಧ್ವನಿ 2 ನಿಮಿಷಗಳ ಸಂದೇಶವು ಆಂಗ್ಲಭಾಷೆ,
ಹಿಂದಿ ಭಾಷೆಯಲ್ಲಿ 1.00 ಮುಂಜಾನೆ ತಮಿಳು ಮತ್ತು
ತೆಲುಗು ಭಾಷೆಯಲ್ಲಿ 2.00 ಮುಂಜಾನೆ ಮತ್ತು ತಮಿಳು
ಮತ್ತು ಆಂಗ್ಲಭಾಷೆಯಲ್ಲಿ ಸಂದೇಶ ಮತ್ತು ಪ್ರಾರ್ಥನೆ
ಭಾನುವಾರ ಮುಂಜಾನೆ 8:30 ಮತ್ತು ಸಂಜೆ 6 ಗಂಟೆಗೆ

ನೀವು ಆಶೀರ್ವಾದವನ್ನು ಹೊಂದಿದ್ದರೆ ದಯಮಾಡಿ ಚಂದಾದಾರರಾಗಿ! ನಿಮ್ಮ ಸ್ನೇಹಿತರಿಗೆ ಮತ್ತು ನಾಳೆ ಹೊಸಬರಿಗೆ ಹಂಚಿಕೊಳ್ಳಿ!

ECHO OF HIS CALL - (Marching towards 60th year)
Estd. 1969



## *from your dearly beloved brother...*



**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Dr. Angeline S. Kumari, M.A., M.Sc., M.Ed.
EX MANAGING EDITOR
Pastor Alex Samson Sam, B.Th., M.Div.
EX ADMINISTRATOR
Sis. Jesy Veena Sam
GENERAL MANAGER
Bro. N. Prakasam, M.A., M.Sc.(C&P), PGDHRM, MBA.
ADMINISTRATION
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Sis. Sajini Cherian
Rev. Dr. J. John Rajarathnam, B.E.S., B.D., M.Th.
Rev. Dr. K.R. Rajasekaran
Adv. N. Balaji, B.Com., M.L.
EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293
Cell : (+91) 98410 71852, 98412 71858
E.MAIL
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.org
YOUTUBE CHANNEL
Echo of His Call

ಈ ನಿಮಿತ್ತವಾಗಿ, ಇಗೋ, ಇದೊಂದೇ ಸಲ ನನ್ನ ಭುಜಬಲವನ್ನೂ ಪರಾಕ್ರಮವನ್ನೂ ಅವರಿಗೆ ತಿಳಿಯಪಡಿಸುವೆನು, ಹೌದು, ಗ್ರಹಿಸ ಮಾಡುವೆನು; ನನ್ನ ನಾಮಧೇಯವು ಯೆಹೋವನೆಂದೇ ಅವರಿಗೆ ಗೊತ್ತಾಗುವುದು.

(ಯೆರೆಮೀಯ 16:21).

ಕರ್ತನಲ್ಲಿ ನನ್ನ ಆತ್ಮೀಯರೇ,

ದೇವರಿಂದ ಕರೆಯಲ್ಪಟ್ಟ ಮತ್ತು ಪ್ರಪಂಚದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ನಮ್ಮ ಪ್ರೀತಿಯ ಸಹೋದರ ಸಹೋದರಿಯರನ್ನು ಯೋಚಿಸುವುದು ಮತ್ತು ಅಭಿನಂದಿಸುವುದು ಎಷ್ಟು ದೊಡ್ಡ ಸಂತೋಷ! ದೂರ, ಭಾಷೆ ಅಥವಾ ಸಂದರ್ಭಗಳನ್ನು ಲೆಕ್ಕಿಸದೆ ಕರ್ತನಲ್ಲಿ ಒಂದಾಗುವ ಸುಯೋಗಕ್ಕಾಗಿ ನಾವು ಆಳವಾಗಿ ಶ್ರೇಷ್ಠರಾಗಿದ್ದೇವೆ.

### ನಮ್ರತೆಯ ಪ್ರಾರಂಭ

ಹೌದು, ಇದು 10ನೇ ಆಗಸ್ಟ್ 1969 ರಂದು ನೆಯ್ಯೂರು ಸಿಎಸ್‌ಐ ಸಭೆಯಲ್ಲಿ ನೆಲ್ಲ್‌ರೈಕೋಣಂ ಎಂಬ ಸಣ್ಣ ಹಳ್ಳಿಯಲ್ಲಿ ಗುಡ್ ನ್ಯೂಸ್ ಪ್ರಾರ್ಥನಾ ಬ್ಯಾಂಡ್ ಎಂಬ ಹೆಸರಿನಲ್ಲಿ ಆತನ ಕರೆಯ ಪ್ರತಿಧ್ವನಿ ಹುಟ್ಟಿದಾಗ ಎಲ್ಲವೂ ನಮ್ರತೆಯಿಂದ ಪ್ರಾರಂಭವಾಯಿತು. ಯೇಸುಕ್ರಿಸ್ತನಿಲ್ಲದೆ ನಾಶವಾಗುತ್ತಿರುವ ಮತ್ತು ಆತನಿಂದ ಬೇರ್ಪಟ್ಟ ಜೀವನದಿಂದಾಗಿ ಶಾಶ್ವತ ವಿನಾಶದತ್ತ ಸಾಗುತ್ತಿರುವ ಪುರುಷರು ಮತ್ತು ಮಹಿಳೆಯರಿಗೆ ನಿಜವಾದ ಭಾರ ಮತ್ತು ದರ್ಶನವನ್ನು ಪಡೆದು ಬೆರಳೆಣಿಕೆಯ ಯುವಕರು ಮತ್ತು ಹುಡುಗಿಯರೊಂದಿಗೆ ಇದು ಪ್ರಾರಂಭವಾಯಿತು.



ನಾನು ಇನ್ನೂ ಯುವಕನಾಗಿದ್ದಾಗ ಇದು ನಡೆಯಿತು. ಕಲ್ವಾರಿಯ ಕರೆಗೆ ಸ್ಪಂದಿಸಿದ ಯುವ ಜನರ ವಿಧೇಯತೆ ಮತ್ತು ಸಮರ್ಪಣೆಯನ್ನು ದೇವರು ನಿಜವಾಗಿಯೂ ಗೌರವಿಸಿದ್ದಾನೆ. ಅಲ್ಲಿ ನಮ್ಮ ಕರ್ತನಾದ ಯೇಸುಕ್ರಿಸ್ತನು ತನ್ನ ಅಮೂಲ್ಯವಾದ ರಕ್ತವನ್ನು ಚೆಲ್ಲಿದನು ಮತ್ತು ನಮಗಾಗಿ ತನ್ನ ಪ್ರಾಣಕೊಟ್ಟನು.

ವರ್ಷಗಳು ಕಳೆದ ಹಾಗೆ, ನಮ್ರತೆಯ ಪ್ರಾರಂಭವು ಆತನ ಕರೆಯ ಪ್ರತಿಧ್ವನಿಯಾಗಿ ಅರಳಿತು. ಈ ಹೆಸರನ್ನು ದೇವರು ಕೊಟ್ಟಿದ್ದಾನೆ ಎಂದು ನಾವು ನಂಬುತ್ತೇವೆ. ಕರ್ತನು ತನ್ನ ಕೃಪೆಯಿಂದ ಪ್ರಪಂಚದ ಅನೇಕ ಭಾಗಗಳಲ್ಲಿ ವಿಸ್ತರಿಸುವಂತೆ ಆತನು ನಮಗೆ ಸಶಕ್ತಗೊಳಿಸಿದ್ದಾನೆ. ಭಾರತವನ್ನು ಒಳಗೊಂಡು ಶ್ರೀಲಂಕಾ, ಮಲೇಷಿಯಾ, ಸಿಂಗಾಪೂರ್, ಇಂಡೋನೇಷಿಯಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಸಂಯುಕ್ತ ರಾಷ್ಟ್ರಗಳು, ಕೆನಡಾ, ಸ್ಕಾಟ್‌ಲ್ಯಾಂಡ್, ಲಂಡನ್ ಮತ್ತು ಸಂಯುಕ್ತ ರಾಜ್ಯದ ಬೇರೆ ಪ್ರದೇಶಗಳು ಮತ್ತು ಇನ್ನೂ ಮುಂದೆ.

ನಿಜವಾಗಿಯೂ ನಮ್ಮ ಕರ್ತನಾದ ಯೇಸುಕ್ರಿಸ್ತನು ದೊಡ್ಡವನಲ್ಲವೇ?

ಕೇವಲ ರೆಕ್ಕೆಗಳನ್ನು ಹರಡಲು ಕರ್ತನು ನಮಗೆ ಸಹಾಯ ಮಾಡಿಲ್ಲ. ಈ ಕೆಳಗೆ ಸೇರಿದಂತೆ ವಿವಿಧ ಸೇವೆಯ ಮೂಲಕ ಆತನು ಈ ಸೇವೆಯನ್ನು ಸಾವಿರಾರು ಜನರಿಗೆ ಆಶೀರ್ವಾದದ ಮೂಲವನ್ನಾಗಿ ಮಾಡಿದ್ದಾನೆ.

- ❖ ಆತನ ಕರೆಯ ಪ್ರತಿಧ್ವನಿಯ ಪತ್ರಿಕೆಯನ್ನು 16 ಭಾಷೆಗಳಲ್ಲಿ ಪ್ರಕಟಿಸಲಾಗಿದೆ.
- ❖ 3 ಭಾಷೆಗಳಲ್ಲಿ ನೆಹೆಮೀಯ ಸತ್ಯವೇದ ಕಾಲೇಜುಗಳು.
- ❖ ಸಂತ ಪೌಲ್‌ಮೆಟ್ರಿಕ್ಯುಲೇಶನ್ ಶಾಲೆ - ಹಳ್ಳಿಯ ಆಂಗ್ಲ ಮಾಧ್ಯಮದ ಪ್ರೌಢಶಾಲೆ.
- ❖ ಎರಡು ಭಾಷೆಗಳಲ್ಲಿ ದೈವಶಾಸ್ತ್ರದ ಅಂಚೆ ಕೋರ್ಸ್‌ಗಳು.
- ❖ 3 ಭಾಷೆಗಳಲ್ಲಿ ಬೈಬಲ್ ಕೋರ್ ಮೂಲಕ ಸತ್ಯವೇದ ಕೋರ್ಸ್‌ಗಳು.
- ❖ ಅನೇಕ ಭಾಷೆಗಳ ಸೇವೆಯ ಸಭೆಗಳು.

- ಸುವಾರ್ತೆ ಮುದ್ರಣ.
- ತರಬೇತಿಯ ಕಾರ್ಯಕ್ರಮಗಳು.
- ಸಾಮಾಜಿಕ ಸೇವೆಗಳು.
- ದೇವರ ರಾಜ್ಯದ ಮುಂದುವರಿಕೆಗಾಗಿ ಇನ್ನೂ ಅನೇಕ ಸೇವೆಗಳನ್ನು ಮಾಡಲಾಗುವುದು.

## ಅರ್ಧ ಸತ್ತ ವ್ಯಕ್ತಿಯನ್ನು ಬಿಟ್ಟು ಹೋಗಿದ್ದು.



ಒಬ್ಬ ವ್ಯಕ್ತಿಯು ಯೆರುಸೇಲೆಮಿನಿಂದ ಯೆರಿಕೋವಿಗೆ ಪ್ರಯಾಣ ಮಾಡುವಾಗ ಕಳ್ಳರ ಕೈಗೆ ಸಿಕ್ಕಿಕೊಂಡದ್ದನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನು ಹೇಳಿದನು. ಆತನನ್ನು ಹೊಡೆದು ಮತ್ತು ಗಾಯಮಾಡಿ ರಸ್ತೆಯ ಬದಿಯಲ್ಲಿ ಅರ್ಧ ಸತ್ತವನಾಗಿ ಬಿಟ್ಟುಹೋದರು. ಆದಾಗ್ಯೂ ಈ ಕಥೆಯು ಅಲ್ಲಿಗೆ ಮುಗಿಯಲಿಲ್ಲ, ಒಳ್ಳೆಯ ಸಮಯದವನು ನೋಡಿದನು. ಅವನ ಮೇಲೆ ಕರುಣೆಯನ್ನು ತೋರಿದನು. ಅವನಿದಲ್ಲಿಗೆ ಬಂದನು. ಗಾಯಗಳಿಗೆ ಕಟ್ಟಿದನು. ಅವನ ಬಗ್ಗೆ ಕಾಳಜಿ ತೋರಿಸಿದನು. ಅದೇ ರೀತಿಯಾಗಿ, ಆಧ್ಯಾತ್ಮಿಕವಾಗಿ ಗಾಯಗೊಂಡ, ಮುರಿದ, ನಿರ್ಲಕ್ಷಿಸಲ್ಪಟ್ಟ ಮತ್ತು ನಿರೀಕ್ಷೆ ಇಲ್ಲದ ಜನರನ್ನು ತಲುಪುವ ಜವಾಬ್ದಾರಿಯನ್ನು ಕರ್ತನು ನಮಗೆ ವಹಿಸಿದ್ದಾನೆ. ಈ ಒಂದು ಕರೆಯುವಿಕೆಯು ಪ್ರಚಂಡ ಭಾರ ಮತ್ತು ದೊಡ್ಡ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ.

## ಭಾರ ಮತ್ತು ಯುದ್ಧ

ಈ ಒಂದು ಸಮಯದಲ್ಲಿ, ನಮ್ಮ ಹೆಗಲ ಮೇಲಿರುವ ಭಾರದ ಪ್ರಮಾಣ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳನ್ನು ನೀವು ಅರ್ಥ ಮಾಡಿಕೊಳ್ಳಬೇಕೆಂದು ನಾವು ಬಯಸುತ್ತೇವೆ.

ಅನೇಕ ಸಮಯಗಳಲ್ಲಿ, ದೇವರು ನಮಗೆ ಒಪ್ಪಿಸಿದ ಎಲ್ಲದರ ತೂಕವನ್ನು ನಾವು ಪ್ರಾಮಾಣಿಕವಾಗಿ ಅನುಭವಿಸುತ್ತೇವೆ. ಆದಾಗ್ಯೂ, ಎಲ್ಲ ಋತುವಿನ ಮೂಲಕ, ಆತನು ನಮ್ಮನ್ನು ಕಾಪಾಡುತ್ತಾನೆ, ಶಕ್ತಿಗೊಳಿಸುತ್ತಾನೆ. ನಾವು ಹಾದುಹೋಗುವ ಎಲ್ಲಾ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಆತನು ನಮ್ಮ ಸಂಗಡ ನಡೆಯುತ್ತಾನೆ.

ನಾವು ವೈರಿಗಳಿಂದ ಅನೇಕ ಸವಾಲುಗಳನ್ನು ಎದುರಿಸುತ್ತೇವೆ. ವಿಶೇಷವಾಗಿ ನಾವು ಸುವಾರ್ತೆಯನ್ನು ವಿರೋಧಿಸುವ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತೇವೆ. ನಾವು ಅನಾರೋಗ್ಯ, ಆರ್ಥಿಕ ಒತ್ತಡಗಳು, ನಿರಾಶೆಗಳು, ಅಸ್ಥಿರತೆ ಮತ್ತು ಸತ್ಯವನ್ನು ವಿರೋಧಿಸುವ ಜನರಿಂದ ಉಂಟಾಗುವ ತೊಂದರೆಗಳನ್ನು ಅನುಭವಿಸುತ್ತಾ ಇದ್ದೇವೆ. ಕೆಲವು ಸಮಯಗಳಲ್ಲಿ ಪ್ರಯಾಣವು ಅಗಾಧವಾಗಿ ಅನುಭವಿಸಬಹುದು.

ಆದಾಗ್ಯೂ, ಈ ಎಲ್ಲಾ ಸನ್ನಿವೇಶಗಳಲ್ಲಿ ನಾವು ನಮ್ಮ ನಂಬಿಕೆಯಲ್ಲಿ ದೃಢವಾಗಿ ನಿಂತಿದ್ದೇವೆ. ನಮ್ಮ ನಡೆಸಲು, ಬಲಪಡಿಸಲು, ರಕ್ಷಿಸಲು ಮತ್ತು ಮುನ್ನಡೆಸಲು ಕರ್ತನಾದ ಯೇಸುಕ್ರಿಸ್ತನು ಪ್ರತಿಯೊಂದು ಸನ್ನಿವೇಶದಲ್ಲಿ ನಮ್ಮೊಂದಿಗಿದ್ದಾನೆ ಎಂದು ಘೋಷಿಸುತ್ತೇವೆ.

ಕರ್ತನಾದ ಯೇಸುಕ್ರಿಸ್ತನ ಅಮೂಲ್ಯದ ರಕ್ತದ ಮೂಲಕ ಮತ್ತು ದೇವರು ನಮಗೆ ನೀಡಿದ ಸಾಕ್ಷಿಯ ಮೂಲಕ ನಾವು ಶತ್ರುವನ್ನು ಜಯಿಸುತ್ತೇವೆ.

**ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದನು. ಪ್ರಕಟನ 12:11**

ಈ ಸೇವೆಯು ಅನೇಕ ಯುದ್ಧಗಳನ್ನು ಎದುರಿಸಬಹುದು. ಆದರೆ ನಮ್ಮ ಭರವಸೆಯು ಕರ್ತನಲ್ಲಿ ಯಾವಾಗಲೂ ಇರುತ್ತದೆ. ನಮ್ಮನ್ನು ಕರೆದಾತನು ನಂಬಿಗಸ್ತನಾಗಿದ್ದಾನೆ. ಆತನ ಉದ್ದೇಶಗಳ ಅನುಸಾರವಾಗಿ ನಮ್ಮನ್ನು ಮುಂದೆ ನಡೆಸುತ್ತಾನೆ ಎಂಬ ಭರವಸೆ ನಮಗೆ ಇದೆ.

ನಿಮ್ಮ ಪಾಲುಗಾರಿಕೆ ನಮಗೆ ಬೇಕು!

ಕೊನೆಯದಾಗಿ, ದೇವರು ನಮಗೆ ಒಪ್ಪಿಸಿದ ದರ್ಶನವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ನಾವು ಪ್ರಯತ್ನಿಸುತ್ತಿರುವಾಗ ನಿಮ್ಮ ಪಾಲುದಾರಿಕೆ ನಮಗೆ ಶ್ರದ್ಧೆಯ ಅಗತ್ಯವಿದೆ.

ಸತ್ಯವಾಗಿ, ನಾವು ನೋಲುಗಳನ್ನು, ಅಪಾಯಗಳನ್ನು, ಆರ್ಥಿಕ ಅಗತ್ಯತೆಗಳು, ಅಸ್ಥಿರತೆ ಮತ್ತು ಬೇರೆ ಸವಾಲುಗಳನ್ನು ಎದುರಿಸುತ್ತಾ ಇದ್ದೇವೆ. ಆದ್ದರಿಂದ, ಪ್ರಾರ್ಥನೆಯಲ್ಲಿ ನಮ್ಮೊಂದಿಗೆ ನಿಲ್ಲುವ ಮತ್ತು ಈ ಮಹಾನ್ ರಾಜ್ಯದ ಸಾಹಸವನ್ನು ಬೆಂಬಲಿಸುವ ದೇವ ಮನುಷರು ಮತ್ತು ಮಹಿಳೆಯರು ನಮಗೆ ಬೇಕು. ನೀವು ನಮಗಾಗಿ ಪ್ರಾರ್ಥಿಸುತ್ತೀರಿ ಮತ್ತು ಕರ್ತನು ನಿಮ್ಮನ್ನು ನಡೆಸುವಂತೆ ನೀವು ನಿಮ್ಮ ಸಹಾಯ ಹಸ್ತವನ್ನು ಚಾಚುತ್ತೀರಾ?

ನಿಮ್ಮ ಪ್ರಾರ್ಥನೆಗಳು, ಪ್ರೋತ್ಸಾಹ, ಸಂಬಂಧ ಮತ್ತು ಪ್ರಾಯೋಗಿಕ ಬೆಂಬಲ ನಮಗೆ ಆಳವಾಗಿ ಮೌಲ್ಯಯುತವಾಗಿದೆ. ಒಟ್ಟಾಗಿ, ಕರ್ತನಾದ ಯೇಸುಕ್ರಿಸ್ತನ ರಕ್ಷಣೆಯ ಸಂದೇಶವನ್ನು ಕೇಳಲು ಅಗತ್ಯವಿರುವವರಿಗೆ ಸುವಾರ್ತೆಯನ್ನು ಒಯ್ಯುವುದನ್ನು ಮುಂದುವರಿಸೋಣ.

ದೇವರು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ!

ಕ್ರಿಸ್ತಯೇಸುವಿನಲ್ಲಿ, ನಿಮ್ಮ ಸಹೋದರ
ಪಾ. ಎಸ್. ಸ್ಯಾಮ್ ಸೆಲ್ವರಾಜ್
E.mail : sam@echoofhiscall.org

(1ನೇ ಪುಟದಿಂದ)

### ಕ್ರಿಸ್ತನ ಬೆಳಕು ಕತ್ತಲೆಯಲ್ಲಿ ಪ್ರವೇಶಿಸಿದಾಗ!

*ದೇವರ ಮೊದಲ ಮಾತುಗಳು ಸೃಷ್ಟಿಗೆ ಮಾತನಾಡಿದ್ದು :*

...ಬೆಳಕಾಗಲಿ... ಆದಿಕಾಂಡ 1:3

ಆದಿಕಾಂಡ 1:1-4 ಪ್ರಸ್ತುತ ಜಗತ್ತು ಕ್ರಮವಿಲ್ಲದೆ ಮತ್ತು ಬರಿದಾಗಿತ್ತು, ಕತ್ತಲೆಯಿಂದ ಆವರಿಸಿಕೊಂಡಿತ್ತು, ಆದಾಗ್ಯೂ ಕತ್ತಲೆಯು ಕಥೆಯ ಸಾರಾಂಶವಲ್ಲ, ದೇವರು ಮಾತನಾಡಿದಾಗ, ಬೆಳಕು ಕತ್ತಲೆಯನ್ನು ಹೊಡೆಯಿತು.

ಆಗ ದೇವರು ಬೆಳಕಾಗಲಿ ಅನ್ನಲು ಬೆಳಕಾಯಿತು. ಆದಿಕಾಂಡ 1:3




Our address:

## VERY URGENT NOTICE!

There may be unavoidable disruptions in the postal dispatch of **Echo of His Call** in the near future. If you wish to continue receiving **Echo of His Call** without interruption, please send us your name, address, email, and WhatsApp number via letter, email, phone call, or SMS/WhatsApp message immediately.

Your support helps us serve you better!

**ECHO OF HIS CALL,**
**10, Mohammed Abdullah 2nd Street, Chepauk, Chennai-600 005, India**
**Cell: (+91) 98412 71858 / 98410 71858 E.mail: sam@echoofhiscall.org**

ನಮ್ಮ ಜೀವನದಲ್ಲಿ ದೇವರ ಕೆಲಸದ ಅದ್ಭುತ ಚಿತ್ರ!

ಕರ್ತನಾದ ಯೇಸುಕ್ರಿಸ್ತನು ಅವ್ಯವಸ್ಥೆ, ಗೊಂದಲ, ಪಾಪ ಮತ್ತು ಖಂಡನೆಯಲ್ಲಿ ಮುಳುಗಿದ ಜಗತ್ತಿಗೆ ಬಂದರು. ಆತನ ಮರಣ ಮತ್ತು ಪುನರುತ್ಥಾನದ ಮೂಲಕ ಆತನ ಹೊಸ ಜೀವನ, ನಿರೀಕ್ಷೆ, ವಿಮೋಚನೆ ಮತ್ತು ಮಾನವ ಕುಲಕ್ಕೆ ರಕ್ಷಣೆಯನ್ನು ತೆಗೆದುಕೊಂಡು ಬಂದನು.

ದೇವರು ಅಸ್ತಿತ್ವಕ್ಕೆ ಬೆಳಕನ್ನು ಹೇಳಿದನು. ಅದೇ ರೀತಿಯಲ್ಲಿ, ಕರ್ತನಾದ ಯೇಸುಕ್ರಿಸ್ತನು ನಮ್ಮ ಜೀವನದಲ್ಲಿ ತನ್ನ ಬೆಳಕನ್ನು ಹೇಳಿದಾಗ, ಕತ್ತಲೆಯು ಕೊನೆಯ ಮಾತನ್ನು ಹೊಂದಿಲ್ಲ.

ನಮ್ಮ ಕುಟುಂಬಗಳಿಗೆ ನಿರೀಕ್ಷೆ ಇದೆ.
ನಮ್ಮ ಮಕ್ಕಳಿಗೆ ನಿರೀಕ್ಷೆ ಇದೆ.
ನಮ್ಮ ಮದುವೆಗಳಿಗೆ ನಿರೀಕ್ಷೆ ಇದೆ.
ನಮ್ಮ ಸೇವೆಗಳಿಗೆ ನಿರೀಕ್ಷೆ ಇದೆ.
ನಮ್ಮ ಭವಿಷ್ಯತ್‌ಗೆ ನಿರೀಕ್ಷೆ ಇದೆ.

ಸಂದರ್ಭಗಳು ಎಷ್ಟೇ ಕತ್ತಲೆಯಾಗಿದ್ದರೂ ಕಾಣಿಸಬಹುದು. ದೇವರಿಂದ ಒಂದು ಮಾತಿನಿಂದ ಎಲ್ಲವೂ ಬದಲಾವಣೆಯಾಗಬಹುದು.

## ದೇವರು ಬೆಳಕಾಗಿದ್ದಾನೆ - ನಾವು ಪ್ರಕಾಶಿಸುವುದಕ್ಕೆ ಕರೆಯಲ್ಪಟ್ಟಿದ್ದೇವೆ!

*ಯೋಹಾನ **1:1-5** ನಮ್ಮನ್ನು ಮತ್ತೆ ಆರಂಭಕ್ಕೆ ಕೊಂಡೊಯ್ಯುತ್ತದೆ ಮತ್ತು ಕರ್ತನಾದ ಯೇಸುಕ್ರಿಸ್ತನ ಶಾಶ್ವತ ಗುರುತನ್ನು ಬಹಿರಂಗ ಪಡಿಸುತ್ತದೆ :*

ಆತನಲ್ಲಿ ಜೀವವಿತ್ತು, ಆ ಒಂದು ಜೀವವು ಎಲ್ಲಾ ಮಾನವ ಕುಲಕ್ಕೆ ಬೆಳಕಾಯಿತು. ಕತ್ತಲೆಯಲ್ಲಿ ಬೆಳಕು ಪ್ರಕಾಶಿಸುತ್ತದೆ. ಕತ್ತಲೆಯು ಅದನ್ನು ಜಯಿಸಲಿಲ್ಲ, (ಯೋಹಾನ 1:4-5).

*ಅಪೊಸ್ತಲನಾದ ಯೋಹಾನನು ಪ್ರಕಟಿಸುತ್ತಾನೆ :*

ದೇವರು ಬೆಳಕಾಗಿದ್ದಾನೆ; ಆತನಲ್ಲಿ ಯಾವುದೇ ಕತ್ತಲ್ ಇರುವುದಿಲ್ಲ, 1 ಯೋಹಾನ 1:5.

ಆದರೆ ಕರ್ತನಾದ ಯೇಸುಕ್ರಿಸ್ತನ ಅನುಯಾಯಿಯಾಗುವುದರಲ್ಲಿ ಅಸಾಮಾನ್ಯವಾದ ಸಂಗತಿಯಿದೆ.

*ಕರ್ತನಾದ ಯೇಸುಕ್ರಿಸ್ತನು ಸ್ವತಃ ಹೇಳಿದ್ದಾನೆ :*

ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಮತ್ತಾಯ 5:14

ವಿರಾಮ ತೆಗೆದುಕೊಂಡು ಅದರ ಬಗ್ಗೆ ಒಂದು ಕ್ಷಣ ಯೋಚಿಸಿ.

ದೇವರು ಬೆಳಕಾಗಿದ್ದಾನೆ.

ಕರ್ತನಾದ ಯೇಸುಕ್ರಿಸ್ತನು ಲೋಕಕ್ಕೆ ಬೆಳಕಾಗಿದ್ದಾನೆ.

ಆತನ ಬೆಳಕನ್ನು ಈ ಲೋಕದಲ್ಲಿ ಪ್ರಕಾಶಿಸುವುದಕ್ಕೆ ನಮ್ಮನ್ನು ಕರೆದಿದ್ದಾನೆ.

ಎಂತಹ ನಂಬಲಾಗದ ಸೌಭಾಗ್ಯ!

ನಾವು ಬೆಳಕಿನ ಮೂಲವಲ್ಲ, ಆತನ ಬೆಳಕನ್ನು ಪ್ರತಿಬಿಂಬಿಸುವುದಕ್ಕೆ ಕರೆಯಲ್ಪಟ್ಟಿದ್ದೇವೆ. ಬೆಳಕು ನಮ್ಮಲ್ಲಿ ಹುಟ್ಟುವುದಿಲ್ಲ. ಅದು ಕರ್ತನಾದ ಯೇಸುಕ್ರಿಸ್ತನಿಂದ ಬರುತ್ತದೆ. ಅರ್ಪಿಸುವ ಜೀವನದ ಮೂಲಕ ಹೊಳೆಯುತ್ತದೆ.

ದೇವರು ಸಾಮಾನ್ಯ ಜನರನ್ನು ತನ್ನ ಅಸಾಧಾರಣ ಬೆಳಕನ್ನು ನೋಡಬಹುದಾದ ಪಾತ್ರೆಗಳಾಗಿ ಬಳಸಲು ಆರಿಸಿಕೊಂಡಿದ್ದಾನೆ. ನಮ್ಮ ಕರ್ತನಾದ ಯೇಸುಕ್ರಿಸ್ತನು ನಮ್ಮಲ್ಲಿ ಮತ್ತು ನಮ್ಮ ಮೂಲಕ ಕೆಲಸ ಮಾಡಲು ಅನುಮತಿಸಿದಾಗ, ಇತರರು ನಮ್ಮ ಮಾತುಗಳು, ಕ್ರಿಯೆಗಳು, ಸ್ವಭಾವ ಮತ್ತು ನಾವು ಜೀವನಕ್ಕೆ ಪ್ರತಿಕ್ರಿಯಿಸುವ ವಿಧಾನಗಳ ಮೂಲಕ ಆತನ ಒಂದು ನೋಟವನ್ನು ಪಡೆಯಬಹುದು.

ಆದ್ದರಿಂದ, ಈ ಕತ್ತಲೆಯ ಜಗತ್ತಿನಲ್ಲಿ ತನ್ನ ಬೆಳಕಿನ ಪ್ರತಿನಿಧಿಗಳಾಗಿ ದೇವರು ನಮ್ಮಿಂದ ಏನನ್ನು ನಿರೀಕ್ಷಿಸುತ್ತಾನೆ?

## 1. ಕತ್ತಲೆಯ ಮೂಲಕವಾಗಿ ಬೆಳಕು ಪ್ರಕಾಶಿಸುತ್ತದೆ!

ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ, (ಯೋಹಾನ 1:5).

ಬೆಳಕಿನ ಮೊದಲು ಮತ್ತು ಅತ್ಯಂತ ಸ್ಪಷ್ಟ ಲಕ್ಷಣ ಇದು : ಬೆಳಕು ಪ್ರಕಾಶಿಸುತ್ತದೆ.

ಬಹಳ ಸ್ಪಷ್ಟವಾಗಿ ಎಲ್ಲಿ ಬೆಳಕು ಪ್ರಕಾಶಿಸುತ್ತದೆ, ಕತ್ತಲೆಯಲ್ಲಿ.

ಎಲ್ಲವೂ ಈಗಾಗಲೇ ಪ್ರಕಾಶಮಾನವಾಗಿ ಮತ್ತು ಆರಾಮದಾಯಕವಾಗಿರುವ ಸ್ಥಳಗಳಿಗೆ ದೇವರು ನಮ್ಮನ್ನು ಕರೆಯಬೇಕಾಗಿಲ್ಲ. ಆತನ ಬೆಳಕು ನಮ್ಮ ಮೂಲಕ ಪ್ರಕಟವಾಗುವಂತೆ ಕತ್ತಲೆ ಇರುವ ಸ್ಥಳಗಳಿಗೆ ನಮ್ಮನ್ನು ಆಗಾಗ್ಗೆ ಕಳುಹಿಸುತ್ತಾನೆ. ಕೆಲವೊಮ್ಮೆ, ನಾವು ಬೆಳಕಿಗೆ ಹಾತೊರೆಯುತ್ತೇವೆ. ನಮ್ಮ ಸುತ್ತಮುತ್ತ ಆರಾಮದಾಯಕವನ್ನು ಬಯಸುತ್ತೇವೆ. ಬೇಕಾಗಿರುವ ಸನ್ನಿವೇಶಗಳು, ಶಾಂತಿಯುತ ಸಂಬಂಧಗಳು ಮತ್ತು ಸುಲಭವಾದ ಋತುಗಳು.

ಆದರೆ ಅತ್ಯಂತ ಕಷ್ಟಕರವೆಂದು ತೋರುವ ಸ್ಥಳವು ಕತ್ತಲೆಯ ಮಧ್ಯದಲ್ಲಿರಬಹುದು. ದೇವರು ನಮ್ಮನ್ನು ಅತ್ಯಂತ ಶಕ್ತಿಯುತವಾಗಿ ಬಳಸಲು ಉದ್ದೇಶಿಸಿರುವ ಸ್ಥಳ.

ಬಹುಶಃ ದೇವರು ನಿಮ್ಮನ್ನು ಕಠಿಣ ಕೆಲಸದ ಸ್ಥಳದಲ್ಲಿ ಇರಿಸಿದ್ದಾನೆ.
ಬಹುಶಃ ನಿಮ್ಮ ಕುಟುಂಬದಲ್ಲಿ ಸವಾಲುಗಳನ್ನು ಎದುರಿಸುತ್ತಾ ಇರಬಹುದು.
ಬಹುಶಃ ನೀವು ನಿಮ್ಮ ಸೇವೆಯಲ್ಲಿ ಬೇಡಿಕೆಯಿರುವ ಋತುವಿನಲ್ಲಿ ನಡೆಯುತ್ತಾ ಇದ್ದೀರಿ.
ಬಹುಶಃ ನಿಮ್ಮ ಭವಿಷ್ಯತ್ತಿನ ಬಗ್ಗೆ ಅಸ್ಥಿರತೆಯನ್ನು ಎದುರಿಸುತ್ತಾ ಇರಬಹುದು.

ಕತ್ತಲೆಯ ಸ್ಥಳವನ್ನು ತಿರಸ್ಕರಿಸಬೇಡಿರಿ.

ನಿಮ್ಮ ಬೆಳಕು ಹೆಚ್ಚು ಪ್ರಕಾಶಮಾನವಾಗಿ ಬೆಳಗಬೇಕೆಂದು ದೇವರು ಬಯಸುವ ಸ್ಥಳವಾಗಿರಬಹುದು.

*ಮೀಕ 7:8 ಹೇಳುತ್ತದೆ :*

...ಕತ್ತಲಲ್ಲಿ ಕೂತಿದ್ದರೂ ಯೆಹೋವನು ನನಗೆ ಬೆಳಕಾಗಿರುವನು.

ಅನೇಕ ಸನ್ನಿವೇಶಗಳಲ್ಲಿ ನಾವು ಕತ್ತಲೆಯಲ್ಲಿ ಕೂತಿರಬಹುದು. ಆದರೆ ಅಲ್ಲಿಯೂ ಕೂಡ ದೇವರು ನಮ್ಮ ಬೆಳಕಾಗಿರುತ್ತಾನೆ.

*ಕೀರ್ತನೆ 18:28 ಪ್ರಕಟಿಸುತ್ತದೆ :*

ನೀನೇ ನನ್ನ ದೀಪವನ್ನು ಹೊತ್ತಿಸುವವನಲ್ಲವೇ, ನನ್ನ ದೇವರಾದ ಯೆಹೋವನು ನನಗೆ ಬೆಳಕನ್ನು ಕೊಟ್ಟು ಕತ್ತಲೆಯನ್ನು ಪರಿಹರಿಸುವವನು.

*ಮತ್ತು ಕೀರ್ತನೆ 23:4 ಪ್ರಕಟಿಸುತ್ತದೆ :*

ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವುದರಿಂದ ಕೇಡಿಗೆ ಹೆದರೆನು.

ನನ್ನ ಪ್ರೀತಿಯ ಸಹೋದರ ಸಹೋದರಿಯರೇ, ನೀವು ಇಂದು ಕತ್ತಲೆಯಿಂದ ಸುತ್ತುವರಿದಿರುವುದನ್ನು ಕಂಡುಕೊಂಡರೆ, ಹೆದರಬೇಡಿರಿ. ದೇವರು ನಿಮ್ಮೊಂದಿಗಿರುವನು.

ನೀವು ಕಣಿವೆಯ ಮೂಲಕವಾಗಿ ಹಾದು ಹೋಗುತ್ತಿರಬಹುದು. ಆದರೆ ನೀವು ಒಬ್ಬರೇ ಹಾದು ಹೋಗುತ್ತಾ ಇಲ್ಲ.

ಇದನ್ನು ಜ್ಞಾಪಕವಿಟ್ಟುಕೊಳ್ಳಿ: ನಾವೇ ಕತ್ತಲಾಗುವ ಮೂಲಕ ನಾವು ಕತ್ತಲೆಯನ್ನು ಜಯಿಸುವುದಿಲ್ಲ.

ಕತ್ತಲೆಯ ಕೋಣೆಯಲ್ಲಿ ದೀಪವನ್ನು ಆರಿಸಿದಾಗ, ಕತ್ತಲೆಯನ್ನು ಭೌತಿಕವಾಗಿ ತೆಗೆದು ಹಾಕಬೇಕಾಗಿಲ್ಲ. ಅದು ಸರಳವಾಗಿ ಬೆಳಕಿನ ಪ್ರಸನ್ನತೆಯಲ್ಲಿ ಮರೆಯಾಗುತ್ತದೆ.

ಕತ್ತಲೆಯು ಬೆಳಕಿಗೆ ದಾರಿಯನ್ನು ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ನಿರಂತರವಾಗಿ ಪ್ರಕಾಶಿಸಿರಿ.

## 2. ಕತ್ತಲೆಯು ಬೆಳಕನ್ನು ಜಯಿಸಲು ಸಾಧ್ಯವಿಲ್ಲ!

ಕತ್ತಲೆಯು ಬಹಳ ಶಕ್ತಿಯುತವಾಗಿ ಕಾಣಿಸಬಹುದು. ಇದು ಬೆದರಿಸುವಂತೆ ಕಾಣಿಸಬಹುದು. ಇದು ಭವಿಷ್ಯತ್ತನ್ನು ಅಸ್ಥಿರವಾಗಿ

(6ನೇ ಪುಟಕ್ಕೆ)

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)
ತ್ವರಿತಗೊಳಿಸುವುದು (II ತಿಮೊಥಿ. 1:6)

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ಸೆಪ್ಟೆಂಬರ್ 2026 ರಿಂದ 18 ಅಕ್ಟೋಬರ್ 2026 ರ ವರೆಗೆ**

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

### ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಅಕ್ಟೋಬರ್ 19 : 10 ಆಗಸ್ಟ್ 2026 ರಂದು ಆತನ ಕರೆಯ ಸೇವೆಗಳು 58ನೇ ವರ್ಷಕ್ಕೆ ಪ್ರವೇಶಿಸಲು ನಮಗೆ ಅನುವು ಮಾಡಿಕೊಡುವಲ್ಲಿ ಆತನ ಕೃಪೆಯ ಆಶೀರ್ವಾದಗಳಿಗಾಗಿ.

ಅಕ್ಟೋಬರ್ 20 : 58ನೇ ವರ್ಷಕ್ಕೆ ನಮ್ಮ ಪ್ರವೇಶವನ್ನು ಗುರುತಿಸಲು ಸಮಾವೇಶ ಕಾರ್ಯಕ್ರಮವನ್ನು ನಡೆಸಲು ನಮಗೆ ಸಹಾಯ ಮಾಡುವಲ್ಲಿ ಆತನ ಸಹಾಯ ಮತ್ತು ಕೃಪೆ.

ಅಕ್ಟೋಬರ್ 21 : ಆತನ ನಿಬಂಧನೆ ಮತ್ತು ಕೃಪೆಯ ಇತರ ಸೇವೆಗಳಿಗೆ ಬೆಂಬಲವನ್ನು ವಿಸ್ತರಿಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ.

ಅಕ್ಟೋಬರ್ 22 : ನಿಯಮಿತವಾಗಿ ದೇವತಾಶಾಸ್ತ್ರದ ಸೆಮಿನಾರ್‌ಗಳನ್ನು ನಡೆಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ.

ಅಕ್ಟೋಬರ್ 23 : 1969 ರಿಂದ ನಿಷ್ಠೆಯಿಂದ ಮುಂದುವರೆಯುತ್ತಿರುವ ಪತ್ರಿಕೆಯ ಸೇವೆಗೆ ನಮ್ಮ ಬದ್ಧತೆಯ ಮೇಲೆ ಅವರ ಹೇರಳವಾದ ಆಶೀರ್ವಾದಗಳು.

ಅಕ್ಟೋಬರ್ 24 : ನಮ್ಮ ಕೆಲಸಗಾರರ ಕುಟುಂಬಗಳ ಮೇಲೆ ಆತನ ಹೇರಳವಾದ ಆಶೀರ್ವಾದಕ್ಕಾಗಿ.

ಅಕ್ಟೋಬರ್ 25 : ನಮ್ಮ ಪಾಲುಗಾರರ ಮತ್ತು ಅವರ ಕುಟುಂಬಗಳ ಮೇಲೆ ಆತನ ದಯೆ ಮತ್ತು ನಂಬಿಗಸ್ತಿಕೆಗಾಗಿ.

ಅಕ್ಟೋಬರ್ 26 : ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯೊಂದಿಗೆ ತಲುಪುವಂತೆ ನಮ್ಮನ್ನು ಸಶಕ್ತಗೊಳಿಸಿ ಆತನ ಕೃಪೆಯಿಂದ ನಮ್ಮನ್ನು ನಡೆಸಿದ್ದಾನೆ.

ಅಕ್ಟೋಬರ್ 27 : ನಮ್ಮ ಮುಖ್ಯ ಸಭೆ ಮತ್ತು ಶಾಖಾ ಸಭೆಗಳಲ್ಲಿ ಅನೇಕ ವಿಶ್ವಾಸಿಗಳನ್ನು ನಮ್ಮ ಸಂಬಂಧಕ್ಕೆ ಸೇರಿಸಿದ್ದಕ್ಕಾಗಿ.

ಅಕ್ಟೋಬರ್ 28 : ಆಗಸ್ಟ್ 15ರಂದು ಯೇಸು ಮಿಷನ್ ಸಭೆ ಮಹಾಬಲಿಪುರಂನಲ್ಲಿ ಮರುಪಡ ಸಭೆಯನ್ನು ನಡೆಸುವಂತೆ ಆತನ ಆಶೀರ್ವಾದಕ್ಕಾಗಿ.

ಅಕ್ಟೋಬರ್ 29 : ಸಂತ ಪೌಲ್‌ಮೆಟ್ರಿಕ್ಯುಲೇಶನ್ ಶಾಲೆ, ನೆಹೆಮೀಯ ಸತ್ಯವೇದ ಕಾಲೇಜುಗಳು, ದೈವಶಾಸ್ತ್ರದ ದೂರ ಶಿಕ್ಷಣಗಳ ಕೋರ್ಸ್‌ಗಳ ಮೇಲೆ ಆತನ ಆಶೀರ್ವಾದಕ್ಕಾಗಿ.

ಅಕ್ಟೋಬರ್ 30 : ನಮ್ಮ ಮುಖ್ಯ ಸಭೆಯಲ್ಲಿ ಮಹಿಳೆಯರ ಸೇವೆಯ ಮೇಲೆ ಆತನ ಆಶೀರ್ವಾದಕ್ಕಾಗಿ.

ಅಕ್ಟೋಬರ್ 31 : ಪಾ. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬದ ಮೇಲೆ ದೇವರ ಹೇರಳವಾದ ಆಶೀರ್ವಾದಕ್ಕಾಗಿ.

ನವೆಂಬರ್ 01 : ಕಳೆದ ತಿಂಗಳು ನಮ್ಮ ಎಲ್ಲಾ ಆತ್ಮೀಕ ಮತ್ತು ಆರ್ಥಿಕ ಅಗತ್ಯತೆಗಳನ್ನು ಪೂರೈಸಿರುವ ಆತನ ನಂಬಿಗಸ್ತಿಕೆಗಾಗಿ.

ನವೆಂಬರ್ 02 : ನಮ್ಮ ಸಹಸಂಪಾದಕರು ಮತ್ತು ಅವರ ಕುಟುಂಬಗಳ ಮೇಲೆ ಆತನ ಆಶೀರ್ವಾದಕ್ಕಾಗಿ.

ನವೆಂಬರ್ 03 : ಜಗತ್ತಿನ ಎಲ್ಲಾ ರಾಷ್ಟ್ರಗಳ ಎಲ್ಲಾ ಜನರ ಮೇಲೆ ಆತನ ಸಂರಕ್ಷಣೆ, ದಯೆ, ಕೃಪೆಗಾಗಿ.

### ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ನವೆಂಬರ್ 04 : ಮಾದಕ ದ್ರವ್ಯ ಮತ್ತು ಮಾದಕ ವ್ಯಸನದಿಂದ ಮಕ್ಕಳು ಮತ್ತು ಯುವಜನರ ರಕ್ಷಣೆಗಾಗಿ.

ನವೆಂಬರ್ 05 : ಆತನ ಕರೆಯ ಸೇವೆಗಳಿಗೆ ಸಮರ್ಪಣೆಯುಳ್ಳ ಕೆಲಸಗಾರರು ದೊರಕುವಂತೆ.

ನವೆಂಬರ್ 06 : ಸಾಯಂಕಾಲದ ನೆಹೆಮೀಯ ಸತ್ಯವೇದ ಕಾಲೇಜಿನ ವಿದ್ಯಾರ್ಥಿಗಳು ಆತ್ಮೀಕ ಬೆಳವಣಿಗೆ, ಶಿಸ್ತು ಮತ್ತು ಸಮರ್ಪಣೆಗಾಗಿ.

ನವೆಂಬರ್ 07 : ನೈಸರ್ಗಿಕ ವಿಪತ್ತುಗಳ ವಿರುದ್ಧ ದೇವರ ದೈವಿಕ ರಕ್ಷಣೆ.

ನವೆಂಬರ್ 08 : ಐಕ್ಯತೆ, ಶಾಂತಿ, ಎಲ್ಲಾ ರಾಷ್ಟ್ರಗಳ ನಡುವೆ ಸೌಹಾರ್ದ ಸಹಬಾಳ್ವೆಗಾಗಿ.

ನವೆಂಬರ್ 09 : ಪ್ರಪಂಚದಾದ್ಯಂತದ ಜನರ ಸುರಕ್ಷತೆ, ರಕ್ಷಣೆ ಮತ್ತು ಯೋಗಕ್ಷೇಮಕ್ಕಾಗಿ.

ನವೆಂಬರ್ 10 : ದೇವರ ಕೃಪೆ ಮತ್ತು ಸುವಾರ್ತೆಯೊಂದಿಗೆ ಭಾರತದಾದ್ಯಂತ ತಲುಪದೇ ಇರುವ ಜನರ ಗುಂಪುಗಳನ್ನು ತಲುಪಲು ಶಕ್ತಿಯನ್ನು ಸಕ್ರಿಯಗೊಳಿಸುವಂತೆ.

ನವೆಂಬರ್ 11 : ನಮ್ಮ ಹಿರಿಯ ಸಭಾಪಾಲಕರಾದ ಪಾ. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬಕ್ಕೆ ದೇವರ ಸುರಕ್ಷತೆ, ಶಕ್ತಿ ಮತ್ತು ಒಳ್ಳೆಯ ಆರೋಗ್ಯಕ್ಕಾಗಿ.

ನವೆಂಬರ್ 12 : ಪ್ರಪಂಚದಾದ್ಯಂತ ಮಕ್ಕಳ ಕಳ್ಳಸಾಗಣೆ ನಿರ್ಮೂಲನೆ ಮತ್ತು ದುರ್ಬಲ ಮಕ್ಕಳ ರಕ್ಷಣೆ ಮತ್ತು ಪುನಸ್ಥಾಪನೆ.

ನವೆಂಬರ್ 13 : ಎಲ್ಲಾ ಕ್ರೈಸ್ತ ಸಂಘ ಸಂಸ್ಥೆಗಳು ಮತ್ತು ಸಭೆಗಳು ದೇವರ ಆಶೀರ್ವಾದ ಮತ್ತು ಸುರಕ್ಷತೆಗಾಗಿ.

ನವೆಂಬರ್ 14 : ಪ್ರಬಲ ಅದ್ಭುತಗಳು, ಸ್ವಸ್ಥತೆಗಳು ಕ್ರಿಸ್ತನ ಸೇವೆಗಳ ಮೂಲಕ ಪ್ರಕಟಗೊಳ್ಳುವಂತೆ.

ನವೆಂಬರ್ 15 : ದೇವರು ಎಲ್ಲಾ ವಿಶ್ವಾಸಿಗಳ ಹೃದಯದ ಕಣ್ಣುಗಳನ್ನು ಬೆಳಗಿಸಲು, ಅವರಿಗೆ ಆಧ್ಯಾತ್ಮಿಕ ತಿಳುವಳಿಕೆ, ಬುದ್ಧಿವಂತಿಕೆ ಮತ್ತು ವಿವೇಚನೆಯನ್ನು ನೀಡುವಂತೆ.

ನವೆಂಬರ್ 16 : ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆಯ ವಿದ್ಯಾರ್ಥಿಗಳು, ದೇವರು ಅವರ ಅಭ್ಯಾಸಗಳನ್ನು ಆಶೀರ್ವದಿಸಿ, ಅವರಿಗೆ ಬುದ್ಧಿವಂತಿಕೆ ಮತ್ತು ತಿಳುವಳಿಕೆಯನ್ನು ನೀಡುವಂತೆ. ಅವರ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಾರ್ಗದರ್ಶನವನ್ನು ನೀಡುವಂತೆ.

ನವೆಂಬರ್ 17 : ಮಹಿಳೆಯರು ಮತ್ತು ಮಕ್ಕಳ ಮೇಲೆ ದೈವಿಕ ರಕ್ಷಣೆಗಾಗಿ.

ನವೆಂಬರ್ 18 : ಆತನ ಕರೆಯ ಪ್ರತಿಧ್ವನಿಯ ಸೇವೆಗಳಿಗೆ ಅಗತ್ಯವಿರುವ ಎಲ್ಲಾ ಆರ್ಥಿಕ ಸಂಪನ್ಮೂಲಗಳನ್ನು ದೇವರು ಆತನ ದಯೆಯಿಂದ ಒದಗಿಸುವಂತೆ.

*(4ನೇ ಪುಟದಿಂದ)*

ಮಾಡುವಂತೆ ಕಾಣಿಸುತ್ತದೆ. ನಮ್ಮೊಳಗೆ ಭಯ ಹುಟ್ಟುವಂತೆ ಮಾಡುತ್ತದೆ.

ಆದರೆ ಕತ್ತಲೆಗೆ ಒಂದು ಮಿತಿ ಇದೆ :

*ಯೋಹಾನ 1:5 ಪ್ರಕಟಿಸುತ್ತದೆ :*

**ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ, ಕೋಣೆಯಲ್ಲಿ ಎಷ್ಟೇ ಕತ್ತಲೆ ಇರಲಿ. ಬೆಳಕು ಪ್ರವೇಶ ಮಾಡಿದ ತಕ್ಷಣವೇ, ಕತ್ತಲೆಯು ತನ್ನ ಅಧಿಪತ್ಯವನ್ನು ಕಳೆದುಕೊಳ್ಳುತ್ತದೆ.**

ಈ ಲೋಕಕ್ಕೆ ನಾವು ಬೆಳಕಾಗಿರಬೇಕೆಂದು ಕರ್ತನಾದ ಯೇಸುಕ್ರಿಸ್ತನು ನಮ್ಮನ್ನು ಕರೆದಿದ್ದಾನೆ. ಆದರೂ ನಮ್ಮ ಜೀವನದಲ್ಲಿ ಸಂದರ್ಭಗಳು ನಮ್ಮ ಸುತ್ತಲಿರುವ ಎಲ್ಲದರ ಮೇಲೆ ನೆರಳು ತೋರುವ ಕ್ಷಣಗಳು ಇರಬಹುದು. ಅದು ವೈದ್ಯರ ರಿಪೋರ್ಟ್ ಇರಬಹುದು.

ಅದು ಸರ್ಕಾರದ ತೀರ್ಮಾನವಾಗಿರ ಬಹುದು.
ಇದು ಕಷ್ಟಕರವಾದ ಕುಟುಂಬ ಪರಿಸ್ಥಿತಿಯಾಗಿರ ಬಹುದು.
ಅದು ಹಣಕಾಸಿನ ಒತ್ತಡವಾಗಿರಬಹುದು.
ಅದು ನಿರಾಕರಣೆ ಆಗಿರಬಹುದು.
ಅದು ಒಂಟಿತನವಾಗಿರಬಹುದು.
ಇದು ಗೊಂದಲ, ಅನಿಶ್ಚಿತತೆ ಅಥವಾ ಭವಿಷ್ಯದ ಬಗ್ಗೆ ಭಯವಾಗಿರಬಹುದು.

*ಆದರೆ ಇದನ್ನು ಸ್ಪಷ್ಟವಾಗಿ ಕೇಳಿ :*

ಕತ್ತಲೆಗೆ ಅಂತಿಮ ಮಾತು ಇಲ್ಲ.

ನಾವು ಕರ್ತನಾದ ಯೇಸುಕ್ರಿಸ್ತನೊಂದಿಗೆ ಸಂಪರ್ಕದಲ್ಲಿದ್ದಾಗ, ನಾವು ನಮ್ಮ ಬೆಳಕಿನ ಮೂಲದೊಂದಿಗೆ ಸಂಪರ್ಕದಲ್ಲಿರುತ್ತೇವೆ.

ಸಂಪರ್ಕ ಕಡಿತವಾಗಿರುವಾಗ ದೀಪವು ನಿರಂತರವಾಗಿ ಪ್ರಕಾಶಿಸುವುದಿಲ್ಲ ತನ್ನ ಶಕ್ತಿಯ ಮೂಲದಿಂದ. ಅದೇ ರೀತಿಯಾಗಿ, ಕರ್ತನಾದ ಯೇಸುಕ್ರಿಸ್ತನೊಂದಿಗಿನ ನಮ್ಮ ಸಂಬಂಧವು ತಣ್ಣಗಾಗಲು ಅಥವಾ ದೂರವಾಗಲು ನಾವು ಅನುಮತಿಸಿದರೆ ನಾವು ಪರಿಣಾಮಕಾರಿಯಾಗಿ ಬೆಳಗಲು ಸಾಧ್ಯವಿಲ್ಲ.

ಕರ್ತನಾದ ಯೇಸುಕ್ರಿಸ್ತನೊಂದಿಗಿನ ನಮ್ಮ ಸಂಪರ್ಕವು ಮುಖ್ಯವಾಗಿದೆ ಮತ್ತು ಅದು ನಮ್ಮ ಶಕ್ತಿಯಾಗಿದೆ.

ನಮ್ಮ ಪ್ರಾರ್ಥನೆಯ ಜೀವಿತವು ಪ್ರಾಮುಖ್ಯವಾಗಿದೆ.
ದೇವರ ವಾಕ್ಯದೊಂದಿಗಿನ ನಮ್ಮ ಸಂಬಂಧವು ಪ್ರಾಮುಖ್ಯವಾಗಿದೆ.
ಕರ್ತನಾದ ಯೇಸುಕ್ರಿಸ್ತನೊಂದಿಗಿನ ನಮ್ಮ ಸಂಬಂಧವು ಪ್ರಾಮುಖ್ಯವಾಗಿದೆ.
ಪವಿತ್ರಾತ್ಮನೊಂದಿಗಿನ ನಮ್ಮ ಅವಲಂಬನೆಯು ಪ್ರಾಮುಖ್ಯವಾಗಿದೆ.

ಶತ್ರುವು ನಮ್ಮನ್ನು ಮೂಲದ ಸಂಪರ್ಕ ಕಡಿತಗೊಳಿಸಲು ಇಷ್ಟಪಡುತ್ತಾನೆ. ಯಾಕೆಂದರೆ ಕರ್ತನಾದ ಯೇಸುಕ್ರಿಸ್ತನಿಂದ ಸಂಪರ್ಕ ಕಡಿತಗೊಂಡ ನಂಬಿಕೆಯು ಆಧ್ಯಾತ್ಮಿಕ ಪರಿಣಾಮಕಾರಿತ್ವದೊಂದಿಗೆ ಹೋರಾಡಲು ಹೆಣಗಾಡುತ್ತದೆ ಎಂದು ಆತನಿಗೆ ತಿಳಿದಿದೆ.

ಆದರೆ ನಾವು ಕರ್ತನಾದ ಯೇಸುಕ್ರಿಸ್ತನಲ್ಲಿ ನೆಲೆಸಿದಾಗ ಆತನ ಬೆಳಕು ನಮ್ಮ ಮೂಲಕ ಬೆಳಗುತ್ತಲೇ ಇರುತ್ತದೆ.

*ಆದ್ದರಿಂದ ನಂಬಿಕೆಯಿಂದ ಘೋಷಿಸೋಣ :*
ನನ್ನ ಆಲೋಚನೆಗಳ ಮೇಲೆ ಕತ್ತಲೆಗೆ ಯಾವುದೇ ಶಕ್ತಿ ಇಲ್ಲ.
ನನ್ನ ಭವಿಷ್ಯದ ಮೇಲೆ ಕತ್ತಲೆಗೆ ಯಾವುದೇ ಶಕ್ತಿ ಇಲ್ಲ.
ನನ್ನ ಕುಟುಂಬದ ಮೇಲೆ ಕತ್ತಲೆಗೆ ಯಾವುದೇ ಶಕ್ತಿ ಇಲ್ಲ.
ನನ್ನ ಕರೆಯ ಮೇಲೆ ಕತ್ತಲೆಗೆ ಯಾವುದೇ ಶಕ್ತಿ ಇಲ್ಲ.
ನನ್ನ ಸೇವೆಯ ಮೇಲೆ ಕತ್ತಲೆಗೆ ಯಾವುದೇ ಶಕ್ತಿ ಇಲ್ಲ.

ನನ್ನಲ್ಲಿರುವ ಕರ್ತನಾದ ಯೇಸುಕ್ರಿಸ್ತನು ನನ್ನನ್ನು ಬೆಳಗಿಸಲು ಸಾಧ್ಯವಾಗಿಸುವ ಬೆಳಕು!

ಆಮೇನ್!

## 3. ಈ ಒಂದು ಋತುವಿನಲ್ಲಿ ಪ್ರಕಾಶಿಸುವುದಕ್ಕೆ ನಾವು ಕರೆಯಲ್ಪಟ್ಟಿದ್ದೇವೆ!

*ಕರ್ತನಾದ ಯೇಸುಕ್ರಿಸ್ತನು ಹೇಳಿದನು :*

ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಮತ್ತಾಯ 5:14

ಕರ್ತನಾದ ಯೇಸುಕ್ರಿಸ್ತನು ಹೇಳಲಿಲ್ಲ ಎಂಬುದನ್ನು ಗಮನಿಸಿ: ಎಲ್ಲವೂ ಉತ್ತಮವಾಗಿ ನಡೆಯುತ್ತಿರುವಾಗ ಮತ್ತು ನಿಮ್ಮ ಪರಿಸ್ಥಿತಿಗಳು ಅನುಕೂಲಕರವಾಗಿರುವಾಗ ನೀವು ಪ್ರಪಂಚದ ಬೆಳಕು.

ಪರಿಸ್ಥಿತಿಗಳು ಅನುಕೂಲಕರವಾಗಿರುವಾಗ ಮಾತ್ರ ಬೆಳಗಬೇಕೆಂದು ಕರೆಯಲ್ಪಟ್ಟಿಲ್ಲ.

ನಾವು ಪ್ರತಿ ಋತುವಿನಲ್ಲಿ ಪ್ರಕಾಶಿಸಬೇಕೆಂದು ಕರೆಯಲ್ಪಟ್ಟಿದ್ದೇವೆ.

ಒಂದು ಪರಿಪೂರ್ಣ ಋತುವು ಎಂದಿಗೂ ಇರುವುದಿಲ್ಲ, ಎಂದಿಗೂ ಪರಿಪೂರ್ಣ ಪರಿಸ್ಥಿತಿಗಳು ಇರುವುದಿಲ್ಲ. ಎಂದಿಗೂ ಪರಿಪೂರ್ಣವಾದ ಒಳ್ಳೆಯ ವಾತಾವರಣ ಇರುವುದಿಲ್ಲ.

ಆದರೂ ನಾವು ಬೆಳಗಲು ಪ್ರಾರಂಭಿಸುವ ಮೊದಲು ಕತ್ತಲೆ ಮಾಯವಾಗುವವರೆಗೆ ಕಾಯಲು ದೇವರು ನಮ್ಮನ್ನು ಕರೆದಿಲ್ಲ.

ಯೋಹಾನ 3:19 ನಮಗೆ ಜ್ಞಾಪಕ ಪಡಿಸುತ್ತದೆ. **ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟದವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು.** ಆದ್ದರಿಂದ, ಬೆಳಕಿನಲ್ಲಿ ನಡೆಯಲು ಆಯ್ಕೆ ಮಾಡುವುದು ಕೆಲವೊಮ್ಮೆ ನಮ್ಮ ಸುತ್ತಮುತ್ತಲಿನ ಪ್ರಪಂಚದಿಂದ ನಮ್ಮನ್ನು ವಿಭಿನ್ನಗೊಳಿಸಬಹುದು.

ಇದು ಯಾವಾಗಲೂ ಪ್ರಸಿದ್ಧವಾಗಿರುವುದಿಲ್ಲ.
ಇದು ಯಾವಾಗಲೂ ಅರ್ಥ ಮಾಡಿಕೊಳ್ಳಲಾಗುವುದಿಲ್ಲ.
ಇದು ಅನೇಕ ಸಾರಿ ನಮಗೆ ಅನಾನುಕೂಲವಾಗುತ್ತದೆ.

ಆದರೆ ನಮ್ಮ ಸುತ್ತಲಿನ ಕತ್ತಲೆಗೆ ಅನುಗುಣವಾಗಿ ನಮ್ಮನ್ನು ಎಂದಿಗೂ ಕರೆಯಲಾಗಿಲ್ಲ.

ನಾವು ಕರ್ತನಾದ ಯೇಸುಕ್ರಿಸ್ತನ ಬೆಳಕನ್ನು ತೆಗೆದುಕೊಂಡು ಹೋಗುವುದು ನಮ್ಮ ಕರೆಯಾಗಿದೆ.

## 4. ಕತ್ತಲೆಯಿಂದ ಬೆಳಕನ್ನು ದೇವರು ಬೇರ್ಪಡಿಸಿದ್ದಾನೆ- ಬೇರ್ಪಡಿಸುವ ಜೀವಿತ!

*ಆದಿಕಾಂಡ 1:3-4 ಹೇಳುತ್ತದೆ :*

ಆಗ ದೇವರು ಬೆಳಕಾಗಲಿ ಅನ್ನಲು **ಬೆಳಕಾಯಿತು. ದೇವರು ಆ ಬೆಳಕನ್ನು ಒಳ್ಳೆಯದೆಂದು ನೋಡಿದನು. ದೇವರು ಬೆಳಕನ್ನೂ ಕತ್ತಲೆಯನ್ನೂ ಬೇರೆ ಬೇರೆ ಮಾಡಿ ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ** ಹೆಸರಿಟ್ಟನು.

ಕ್ರಮವನ್ನು ಗಮನಿಸಿ :

ಕತ್ತಲೆಗೆ ದೇವರು ಬೆಳಕನ್ನು ಮಾತನಾಡಿದನು. ನಂತರ, ಆತನು ಕತ್ತಲೆಯಿಂದ ಬೆಳಕನ್ನು ಬೇರ್ಪಡಿಸಿದನು.

ಇದು ಪ್ರತಿಯೊಬ್ಬ ನಂಬಿಕೆಯುಳ್ಳವರಿಗೆ ಆಳವಾದ ಸಂದೇಶವನ್ನು ಹೊಂದಿದೆ.

ದೇವರು ನಾವು ಬೆಳಗುವುದಕ್ಕೆ ಮಾತ್ರವಲ್ಲ, ಆದರೆ ಬೇರ್ಪಾಡು ಆಗಬೇಕೆಂದು ಕರೆದಿದ್ದಾನೆ.

ಉದ್ದೇಶಪೂರ್ವಕವಾಗಿ ಕತ್ತಲೆಯನ್ನು ಅಳವಡಿಸಿಕೊಳ್ಳುವಾಗ ನಾವು ಬೆಳಕನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಲು ಸಾಧ್ಯವಿಲ್ಲ.

ಒಂದು ವ್ಯತ್ಯಾಸ ಇರಬೇಕು.
ಒಂದು ಪವಿತ್ರತೆ ಇರಬೇಕು.
ನಾವು ಹೇಗೆ ಜೀವಿಸುತ್ತಾ, ಮಾತು, ಆಲೋಚನೆ, ಕೆಲಸ, ಬೇರೆಯವರನ್ನು ಗೌರವಿಸುವ ರೀತಿ, ತೀರ್ಮಾನಗಳನ್ನು ಮಾಡುವುದು ಮತ್ತು ಹೇಗೆ ನಡೆದುಕೊಳ್ಳುತ್ತೇವೆ ಎಂದು ಕಾಣುವ ವ್ಯತ್ಯಾಸ ಇರಬೇಕು.

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikaans.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Branch Churches: Santhoshapuram, Balaji Nagar & Velachery
7. Great Commission Partners (Network of Pastors)
8. Training Programmes – Seminars & Retreats
9. Crusades
10. Literature Distribution and Follow Up
11. Gospel Printing Press - Publications
12. St. Paul's Matriculation School - Village English High School
13. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
14. **Early Morning Service : 5.30 a.m. Sunday**
15. **Preliminary Service : 8.00 a.m. Sunday**
16. **Tamil Service : 8.30 a.m. Sunday**
17. **Children School : 11.00 a.m. Sunday**
18. **Youth Meeting : 11.00 a.m. Sunday**
19. **Elders for Christ Meeting : 11.00 a.m. Sunday**
20. **Fellowship Lunch : 01.00 p.m. Sunday**
21. **Telugu Service : 4.00 p.m. Sunday**
22. **Hindi Service : 5.00 p.m. Sunday**
23. **Tamil & English Service : 6.00 p.m. Sunday**
24. Feedback Time : 8.00 p.m. Sunday
25. Women's Prayer : 5.30 p.m. Wednesday
26. Men's Prayer : 7.00 p.m. Friday
27. Discipleship Meeting : 6.00 p.m. Saturday
28. House Meetings : 6.30 p.m. Tuesday & Thursday
29. Special Holy Communion : 6.00 a.m. 1st day of each month
30. Workers Meeting : 5.30 p.m. First Saturday
31. Parents' Prayer : 4.00 p.m. First Sunday
32. Night Prayer : 9.30 p.m. Third Friday
33. Fasting Prayer : 9:30 a.m. Second Saturday
34. Holy Communion : Second Sunday Service
35. Youth / Kid Prayer : 10.00 p.m. daily (over phone)
36. Staff Devotion : 9.00 a.m. daily
37. Office : 9.00 a.m. to 9.00 p.m. (except Sundays)

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | |
|---|---|
| **Account Name** | **: ECHO OF HIS CALL EDUCATIONAL TRUST** |
| **Account Number** | **: 1023 2923 805** |
| **Bank Name** | **: STATE BANK OF INDIA** |
| **Branch** | **: TRIPLICANE, CHENNAI - 600 005** |
| **IFSC Code** | **: SBIN 0000249** |
| **SWIFT Code** | **: SBI NIN BB 455** |


ನಮ್ಮ ಜೀವನವು ನಾವು ಪ್ರತಿನಿಧಿಸುವ ವ್ಯಕ್ತಿಯನ್ನು ಪ್ರತಿಬಿಂಬಿಸಬೇಕು.

ಯೆಶಾಯ 42:6-7 ಹೇಳುತ್ತದೆ. ನನ್ನ **ಜನರಿಗೆ ಒಡಂಬಡಿಕೆಯ ಆಧಾರವನ್ನಾಗಿಯೂ ಅನ್ಯಜನಗಳಿಗೆ ಬೆಳಕನ್ನಾಗಿಯೂ ನೇಮಿಸಿದ್ದೇನೆ.**

ನಮ್ಮ ಸ್ವಂತ ಜೀವನದ ಗಡಿಯೊಳಗೆ ಉಳಿಯಲು ಉದ್ದೇಶಿಸದ ಬೆಳಕನ್ನು ನಮಗೆ ವಹಿಸಲಾಗಿದೆ.

ನಮ್ಮ ಮನೆಗಳು ಬೆಳಕನ್ನು ಅನುಭವಿಸಬೇಕು. ನಮ್ಮ ಕೆಲಸದ ಸ್ಥಳಗಳಲ್ಲಿ ಬೆಳಕನ್ನು ಅನುಭವಿಸಬೇಕು.

ನಮ್ಮ ಸಭೆಗಳು ಬೆಳಕನ್ನು ಅನುಭವಿಸಬೇಕು. ನಮ್ಮ ಸಮುದಾಯಗಳು ಬೆಳಕನ್ನು ಅನುಭವಿಸಬೇಕು.

ನಮ್ಮ ಪೀಳಿಗೆಯು ಬೆಳಕನ್ನು ಅನುಭವಿಸಬೇಕು.

ನಾವು ಅವುಗಳನ್ನು ಮರೆಮಾಡಲು ದೇವರು ನಮ್ಮ ದೀಪಗಳನ್ನು ಬೆಳಗಿಸಲಿಲ್ಲ, ನಾವು ಬೆಳಗುವುದಕ್ಕಾಗಿ ಕರೆದಿದ್ದಾನೆ.

## 5. ಬೆಳಕಿನ ರಕ್ಷಾಕವಚವನ್ನು ಧರಿಸಿ!

*ಅಂತಿಮವಾಗಿ ರೋಮ **13:12** ನಮಗೆ ಶಕ್ತಿಯುತವಾದ ಸವಾಲನ್ನು ಕೊಡುತ್ತದೆ :*

**ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು. ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ.**

*ದೇವರ ವಾಕ್ಯದ ಭಾವನೆಯನ್ನು ಗಮನಿಸಿರಿ :*

"ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿನ ಆಯುಧಗಳನ್ನು ಧರಿಸಿ."

"ಬೆಳಕು ಕೇವಲ ನಾವು ನೋಡುವಂತಹದ್ದು ಅಲ್ಲ."

ಇದು ನಾವು ಹಾಕುವ ಮತ್ತು ಬದುಕಲು ಕರೆಯಲ್ಪಟ್ಟ ವಿಷಯವಾಗಿದೆ.

ಬೆಳಕಿನ ರಕ್ಷಾಕವಚವನ್ನು ಧರಿಸುವುದು ಅಂದರೆ ಒಳಗೊಂಡಿರುವ ಬದಲು ಸದಾಚಾರವನ್ನು ಆರಿಸುವುದು.

*ಇದರ ಅರ್ಥ :*

- ಪಾಪದ ಮೇಲೆ ಪವಿತ್ರತೆಯನ್ನು ಆರಿಸಿಕೊಳ್ಳುವುದು.
- ಮೋಸದ ಮೇಲೆ ಸತ್ಯವನ್ನು ಆರಿಸಿಕೊಳ್ಳುವುದು.
- ಕಹಿತನದ ಮೇಲೆ ಕ್ಷಮಾಪಣೆಯನ್ನು ಆರಿಸಿಕೊಳ್ಳುವುದು.
- ಭಯದ ಮೇಲೆ ನಂಬಿಕೆಯನ್ನು ಆರಿಸಿಕೊಳ್ಳುವುದು.



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)

## ತನ್ನ ಸೇವಕರನ್ನು ಎಂದಿಗೂ ಕೈಬಿಡದ ಮಹಾನ್ ದೇವರು !

ನನ್ನ ಆರಂಭಿಕ ದಿನಗಳಲ್ಲಿ ನಾನು ವಿವಿಧ ವಲಯಗಳಲ್ಲಿ ವಿರೋಧವನ್ನು ತುಂಬಾ ಸಾಮಾನ್ಯವಾಗಿತ್ತು. ನಾನು ಕರ್ತನ ಸೇವೆಯಲ್ಲಿ ತೊಡಗಿಸಿಕೊಂಡಿದ್ದರಿಂದ ನನ್ನ ನಿವಾಸ ಮತ್ತು ಕಚೇರಿಯನ್ನು ಬದಲಾಯಿಸಬೇಕಾಯಿತು.

1978ರಲ್ಲಿ, ಚೆನ್ನೈನಲ್ಲಿ ಒಂದು ಚಿಕ್ಕ ಮನೆಯನ್ನು ಬಾಡಿಗೆಗೆ ತೆಗೆದುಕೊಂಡೆನು. ಎಂದಿನಂತೆ ನನ್ನ ಸಭಾಪಾಲಕರಾದ ಪಾ. ಜಿ. ಸುಂದರಂ (ಅಪೋಸ್ತಲಿಕ್ ಕ್ರಿಶ್ಚಿಯನ್ ಅಸೆಂಬ್ಲಿ ಮುಖ್ಯ ಪಾಲಕರು) ಅವರನ್ನು ಬಂದು ಆಶೀರ್ವದಿಸುವಂತೆ ವಿನಂತಿಸಿದೆ. ನಾನು ಮನೆಗೆ ಹೋಗುವ ಮೊದಲು ಅವರ ಸಹಾಯಕ ಸಭಾಪಾಲಕರಾದ ಪಾ.ಎಮ್.ಕೆ.ಸ್ಯಾಮ್ ಸುಂದರಂರವರನ್ನು ಕಳುಹಿಸಿದರು. ಇವರು ಬಹಳ ಗೌರವಾನ್ವಿತ ಮತ್ತು ಪ್ರೀತಿಯ ದೇವರ ಸೇವಕರು. ಈಗ ಇವರು ಮುಖ್ಯ ಸಭಾಪಾಲಕರಾಗಿದ್ದಾರೆ. ಅಪೋಸ್ತಲಿಕ್ ಕ್ರಿಶ್ಚಿಯನ್ ಅಸೆಂಬ್ಲಿಗೆ. ಆ ಹೊತ್ತಿನ ದಿನ ನಾವು ಇಬ್ಬರು ಒಂದೇ ಟ್ಯಾಕ್ಸಿಯಲ್ಲಿ ಹೋದೆವು. ನನ್ನ ಹತ್ತಿರ ಸ್ವಲ್ಪ ಹಣವಿತ್ತು. ಆ ಟ್ಯಾಕ್ಸಿಯ ಪ್ರಯಾಣವನ್ನು ನಾವು ಪ್ರಾರಂಭಿಸಿದ ಸಮಯದಿಂದ, ಸಭಾಪಾಲಕರು ಕಣ್ಣುಮುಚ್ಚಿ ಪ್ರಾರ್ಥನೆ ಮಾಡುತ್ತಿದ್ದರು. ಆದರೆ ನಾನು ನಮ್ಮ ಪ್ರಯಾಣದ ಶುಲ್ಕವನ್ನು ತೋರಿಸುವ ಮೀಟರ್ ಬಾಕ್ಸ್‌ನ್ನು ನೋಡುತ್ತಿದ್ದೆ.

ಸಮಯವು ಕಳೆಯುತ್ತಾ ಇತ್ತು. ಮೀಟರ್ ಬಾಕ್ಸ್‌ನಲ್ಲಿ ತೋರಿಸಿರುವ ಮೊತ್ತವು ನನ್ನ ಕೈಯಲ್ಲಿದ್ದ ಮೊತ್ತಕ್ಕೆ ತುಂಬಾ ಹತ್ತಿರದಲ್ಲಿತ್ತು. ಕೆಲವು ನಿಮಿಷಗಳಲ್ಲಿ ತೋರಿಸಲಾದ ಮೊತ್ತವು ನನ್ನ ಕೈಯಲ್ಲಿ ನಿಖರವಾಗಿತ್ತು. ನಾವು ಇನ್ನೂ ದೂರ ಹೋಗಬೇಕಾಗಿತ್ತು. ನನ್ನ ಹತ್ತಿರ ಹೆಚ್ಚು ಹಣವಿರಲಿಲ್ಲ. ನನ್ನ ಬಳಿಯಿದ್ದ ಹಣಕ್ಕಾಗಿ ವಾಹನವು ಆದಾಗಲೇ ಓಡಿತ್ತು. ವಾಹನವು ಇನ್ನೂ ಮುಂದೆ ಹೋಗುವ ಭಯವು ನನಗೆ ಇತ್ತು. ನಾನು ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತೇನೆ. ನನ್ನ ಜೊತೆಯಲ್ಲಿ ಹಿರಿಯ ಸಭಾಪಾಲಕರು ಇದ್ದಾರೆ. ನಾನು ಮಾಡಬೇಕೆಂದು ನನಗೆ ತೋಚಲಿಲ್ಲ. ನನ್ನ ಹೃದಯದಲ್ಲಿ ಅತ್ತೆನು. ಓ ಪ್ರೀತಿಯ ಕರ್ತನಾದ ತಂದೆಯೇ, ನಾನು ಏನು ಮಾಡಲಿ ? ನನ್ನ ಹತ್ತಿರ ಹೆಚ್ಚು ಹಣವಿಲ್ಲ. ನನಗೆ ಬೆವರು ಬರುವುದಕ್ಕೆ ಪ್ರಾರಂಭವಾಯಿತು. ಆದರೆ ವಾಹನವು ಬಹಳ ವೇಗವಾಗಿ ಹೋಯಿತು. ನಂತರ ನಾನು ಮೀಟರ್‌ನ್ನು ನೋಡಿದಾಗ, ಅದು ಸಿಕ್ಕಿಹಾಕಿಕೊಂಡು ನನ್ನ ಕೈಯಲ್ಲಿದ್ದ ಮೊತ್ತದಲ್ಲಿ ನಿಂತಿರುವುದನ್ನು ನೋಡಿ ನನಗೆ ಆಶ್ಚರ್ಯ ವಾಯಿತು. ನನ್ನ ಕಣ್ಣುಗಳಲ್ಲಿ ನೀರು ತುಂಬಿದವು.

ನಾವು ಮನೆಯನ್ನು ತಲುಪಿದೆವು. ಸಭಾಪಾಲಕರಿಗೆ ಇದು ಯಾವುದು ಗೊತ್ತಾಗಲಿಲ್ಲ. ನಾವು ಟ್ಯಾಕ್ಸಿ ಇಳಿದ ತಕ್ಷಣವೇ ನಾನು ಚಾಲಕನ ಕೈಹಿಡಿದುಕೊಂಡು ಹೀಗೆ ಹೇಳಿದೆನು, ಪ್ರೀತಿಯ ಸಹೋದರ, ನಾನು ಜೀವಿಸುವ ದೇವರ ಸೇವಕನಾಗಿದ್ದೇನೆ. ನನ್ನ ಕೈಯಲ್ಲಿ ಇಷ್ಟು ಹಣ ಮಾತ್ರವಿದೆ. ನನ್ನ ಬಳಿ ಇದ್ದ ಮೊತ್ತವನ್ನು ತೋರಿಸುವ ದಾರಿಯಲ್ಲಿ ನಿಮ್ಮ ಮೀಟರ್ ನಿಂತುಹೋಯಿತು. ದಯಮಾಡಿ ನನಗೆ ಒಂದು ಗಂಟೆ ಸಮಯವನ್ನು ಕೊಡು. ಆದ್ದರಿಂದ ನಾವು ಕ್ರಮಿಸಿದ ದೂರಕ್ಕೆ ನೀನು ಕೇಳಬಹುದಾಗ ಹಣವನ್ನು ನಾನು ನಿನಗೆ ನೀಡಲು ಸಾಧ್ಯವಾಗುತ್ತದೆ. ದಯಮಾಡಿ ನನ್ನ ಅತಿಥಿಯವರಿಗೆ ಏನು ಹೇಳಬೇಡಿರಿ. ಅವರು ನಮ್ಮ ಗೌರವಾನ್ವಿತ ಸಭಾಪಾಲಕರು.

ತಕ್ಷಣವೇ ಓ ಚಾಲಕನು ನನ್ನನ್ನು ಅಪ್ಪಿಕೊಂಡು ನಾನು ಕೂಡ ದೇವರ ಮಗನೆಂದು ಹೇಳಿದನು. ನಿಮಗೆ ಸಹಾಯ ಮಾಡಲು ದೇವರು ನನಗೆ ಅವಕಾಶವನ್ನು ಕೊಟ್ಟಿದ್ದಾನೆ ಎಂದು ನಾನು ಪೂರ್ಣ ಹೃದಯದಿಂದ ನಂಬುತ್ತೇನೆ. ಇದನ್ನು ಹೇಳಿದ ಮೇಲೆ ನಾನು ಕೊಟ್ಟಂತಹ ಹಣವನ್ನು ನನಗೆ ವಾಪಸ್ಸು ಹಿಂತಿರುಗಿಸಿ ಹೀಗೆ ಹೇಳಿದನು. ದಯಮಾಡಿ ನನ್ನ ಪ್ರೀತಿಯ ಕಾಣಿಕೆಯನ್ನು ಸ್ವೀಕರಿಸಿರಿ. ನೀವು ಹಾಲನ್ನು ತೆಗೆದುಕೊಳ್ಳಿರಿ ಮತ್ತು ನೀವು ಹೊಸ ಮನೆಗೆ ಹೋಗುತ್ತೀರಿ ನಿಮಗೆ ಸಹಾಯ ಮಾಡಿಕೊಳ್ಳಿರಿ. ನಾನು ಸೇವಿಸುವ ಕರ್ತನು ನಿಮ್ಮನ್ನು ಮಿಲೇನಿಯರನ್ನಾಗಿ ಮಾಡಲಿ. ಹೀಗೆ ಹೇಳಿ ಹೊರಟು ಹೋದನು. ನನ್ನ ಜೀವಿತದಲ್ಲಿ ಇದುವರೆಗೆ ಆತನನ್ನು ನಾನು ನೋಡಲಿಲ್ಲ.

ನಾನು ಹಾಲನ್ನು ತೆಗೆದುಕೊಂಡು ಬಂದೆ ಮತ್ತು ನನ್ನ ಹೊಸ ಮನೆಯಲ್ಲಿ ಸಭಾಪಾಲಕರು ಹಾಲನು ಸೇವಿಸಿ ಸಂತೋಷಿಸಿದರು. ಆ ಹೊತ್ತು ಸಭಾಪಾಲಕರು ಹಾಡಿದಂತಹ ಹಾಡು ನನಗೆ ಇನ್ನೂ ಜ್ಞಾಪಕದಲ್ಲಿದೆ. ಅವರು ಹಾಡುತ್ತಿರುವಾಗ ನಾನು ಜೋರಾಗಿ ಅಳುತ್ತಿದ್ದೆನು. ಅವರು ಹಾಡುವುದನ್ನು ನಿಲ್ಲಿಸಿ ಸಹೋದರ ಸ್ಯಾಮ್ ಯಾಕೆ ನೀನು ಹೀಗೆ ಅಳುತ್ತಾ ಇದ್ದೀಯಾ ಎಂದು ಕೇಳಿದರು ? ನಡೆದ ಘಟನೆಯನ್ನು ಎಲ್ಲಾ ಹೇಳಿದೆನು. ಆತನು ಕೂಡ ಅತ್ತನು. ನೀನು ಯಾಕೆ ಚಿಂತೆ ಮಾಡುತ್ತೀಯಾ? ನೀನು ನನ್ನನ್ನು ಕೇಳಿದ್ದರೆ ನಾನು ಹಣವನ್ನು ಕೊಡುತ್ತಿದ್ದೆ ಎಂದು ನಿನಗೆ ತಿಳಿದಿಲ್ಲವೇ? ಪರವಾಗಿಲ್ಲ, ದೇವರು ನಿನ್ನ ಸಂಗಡ ಇದ್ದಾನೆ, ಚಿಂತೆ ಮಾಡಬೇಡ. ಆತನು ನಿನ್ನನ್ನು ಸಾವಿರಾರು ಜನರಿಗೆ ಉಪಯುಕ್ತವಾಗಿಸುವ ಸಾಧನವಾಗಿ ಬಳಸುತ್ತಾನೆ ಮತ್ತು ನಿನ್ನನ್ನು ತನ್ನ ಸಾಕ್ಷಿಯಾಗಿ ಮತ್ತು ದೇವ ಸೇವಕನಾಗಿ ಬದಲಾಯಿಸುತ್ತಾನೆ. ಈ ರೀತಿಯಾಗಿ ಆಶೀರ್ವದಿಸಿ ಅವರು ಮನೆಯಿಂದ ಹೊರಟು ಹೋದರು. ಆ ಒಂದು ದಿನ ಆ ಮನೆಯಲ್ಲಿ ಕೇವಲ ನಾವು ಇಬ್ಬರು ಮಾತ್ರ ಇದ್ದೆವು.

ಪ್ರೀತಿಯ ಸಹೋದರ ಮತ್ತು ಸಹೋದರಿಯೇ, ಈ ಒಂದು ಘಟನೆಯ ಬಗ್ಗೆ ನೀವು ಏನು ಆಲೋಚನೆ ಮಾಡುತ್ತೀರಿ ? ನಿಮ್ಮ ಅನುಭವ ಏನು? ಕರ್ತನಾದ ಯೇಸುಕ್ರಿಸ್ತನು ನಿಮ್ಮ ಜೀವಿತದಲ್ಲಿ ದೊಡ್ಡ ಅದ್ಭುತ ಕಾರ್ಯಗಳನ್ನು ಮಾಡುವನು. ಕೇವಲ ಆತನನ್ನು ಮಾತ್ರ ಗಟ್ಟಿಯಾಗಿ ಹಿಡಿದುಕೊಳ್ಳಿರಿ!

******************

- ಅನುಕೂಲದ ಮೇಲೆ ವಿಧೇಯತೆಯನ್ನು ಆರಿಸಿಕೊಳ್ಳುವುದು.
- ಈ ಪ್ರಪಂಚದ ಮಾದರಿಗಳು ಮತ್ತು ಮೌಲ್ಯಗಳ ಮೇಲೆ ಕರ್ತನಾದ ಯೇಸುಕ್ರಿಸ್ತನನ್ನು ಆರಿಸಿಕೊಳ್ಳುವುದು.

ನಾವು ಬೆಳಕಿನ ಕವಚವನ್ನು ಧರಿಸಿಕೊಳ್ಳುವಾಗ, ಕತ್ತಲೆಯ ಕೆಲಸಗಳ ವಿರೋಧವಾಗಿ ದೃಢವಾಗಿ ನಿಲ್ಲಲು ನಾವು ಸಜ್ಜಾಗುವುದು.

### *ನಿಮ್ಮ ಬೆಳಕು ಬೆಳಗಲಿ!*

ಪ್ರೀತಿಯ ಆತ್ಮೀಯರೇ, ದೇವರ ವಾಕ್ಯವು ನಮಗೆ ನೀತಿವಂತನ ಜೀವನದ ಬಗ್ಗೆ ಸುಂದರವಾದ ಭರವಸೆಯನ್ನು ನೀಡುತ್ತದೆ.

*ಶಿಷ್ಟರ ಬೆಳಕು ಬೆಳಗುವುದು.*
- ಜ್ಞಾನೋಕ್ತಿ 13:9

ನಾವು ಬೆಳಕಿನಲ್ಲಿ ನಡೆಯುವಾಗ, ನೀತಿವಂತನಾದ ಕರ್ತನಾದ ಯೇಸುಕ್ರಿಸ್ತನು ನಮ್ಮ ಜೀವಿತಗಳನ್ನು ರೂಪಿಸಲಿ. ಆತನ ಬೆಳಕು ಅತ್ಯಂತ ಕಷ್ಟಕರ ಸಂದರ್ಭಗಳಲ್ಲಿಯೂ ನಮ್ಮ ಮೂಲಕ ಬೆಳಗುತ್ತದೆ.

ನಿಮ್ಮ ಬೆಳಕು ಮುಖ್ಯವಾಗಿದೆ.
ನಿಮ್ಮ ಸಾಕ್ಷಿಯು ಮುಖ್ಯವಾಗಿದೆ.
ನಿಮ್ಮ ಪ್ರಾರ್ಥನೆಗಳು ಮುಖ್ಯವಾಗಿವೆ.
ನಿಮ್ಮ ವಿಧೇಯತೆಯು ಮುಖ್ಯವಾಗಿದೆ.
ನಿಮ್ಮ ನಂಬಿಕೆ ಮುಖ್ಯವಾಗಿದೆ.
ನಿಮ್ಮ ವಿಧೇಯತೆಯು ಮುಖ್ಯವಾಗಿದೆ.
ನಿಮ್ಮ ಕುಟುಂಬಕ್ಕೆ ಬೆಳಕು ಅಗತ್ಯವಿದೆ.
ನೀವು ಕೆಲಸ ಮಾಡುವ ಸ್ಥಳಗಳಲ್ಲಿ ಬೆಳಕಿನ ಅಗತ್ಯವಿದೆ.
ನಿಮ್ಮ ಸಮುದಾಯಗಳಿಗೆ ಬೆಳಕಿನ ಅಗತ್ಯವಿದೆ.
ನಿಮ್ಮ ಸಭೆಗೆ ಬೆಳಕಿನ ಅಗತ್ಯವಿದೆ.

ಕೆಲವು ಜನರು ಸಭೆಯ ಕಟ್ಟಡದ ಬಾಗಿಲುಗಳ ಮೂಲಕ ನಡೆಯಲು ಸಾಧ್ಯವಿಲ್ಲ. ಆದರೆ ಅವರು ನಿಮ್ಮ ಜೀವನದಲ್ಲಿ ಹೊಳೆಯುತ್ತಿರುವ ಬೆಳಕಿನ ಮೂಲಕ ಕರ್ತನಾದ ಯೇಸುಕ್ರಿಸ್ತನನ್ನು ಭೇಟಿಯಾಗಬಹುದು.

ಆದ್ದರಿಂದ ಬೆಳಕನ್ನು ಮುಚ್ಚಿಡಬೇಡಿ.

ನಿಮ್ಮ ನಂಬಿಕೆಯ ವಿಷಯದಲ್ಲಿ ಕ್ಷಮಾಪಣೆಯನ್ನು ಕೇಳಬೇಡಿರಿ.
ನಿಮ್ಮ ಸಾಕ್ಷಿಯನ್ನು ಮೌನಗೊಳಿಸಲು ಕಷ್ಟಕರ ಸಂದರ್ಭಗಳನ್ನು ಅನುಮತಿಸಬೇಡಿ.
ನಿಮ್ಮ ಬೆಳಕು ಅತ್ಯಲ್ಪ ಎಂದು ನಿಮಗೆ ಮನವರಿಕೆ ಮಾಡಲು ಕತ್ತಲನ್ನು ಅನುಮತಿಸಬೇಡಿ.

ನಿರಂತರವಾಗಿ ಬೆಳಗಿರಿ!

ಭಾರತದಾದ್ಯಂತ ಆಚರಿಸಲಾಗುವ ಬೆಳಕಿನ ಹಬ್ಬವನ್ನು ನಾವು ಪ್ರತಿಬಿಂಬಿಸುವಾಗ, ನಾವು ಇನ್ನೂ ಹೆಚ್ಚಿನ ಬೆಳಕನ್ನು ನೆನಪಿಸಿಕೊಳ್ಳೋಣ.

ತಾತ್ಕಾಲಿಕವಾದ ದೀಪವಲ್ಲ,
ನಂದಿಸಬಹುದಾದ ಬೆಳಕಲ್ಲ,
ಮಾನವ ಕೈಗಳಿಂದ ಉತ್ಪತ್ತಿಯಾಗುವ ಬೆಳಕಲ್ಲ.

ಆದರೆ ಕರ್ತನಾದ ಯೇಸುಕ್ರಿಸ್ತನು-ಲೋಕಕ್ಕೆ ಬೆಳಕಾಗಿದ್ದಾನೆ.

ನಮ್ಮ ಕತ್ತಲೆಯೊಳಗೆ ಆತನು ಪ್ರವೇಶಿಸಿದನು.
ಆತನು ನಮ್ಮ ಕಣ್ಣುಗಳನ್ನು ತೆರೆದನು.
ಆತನು ರಕ್ಷಣೆಯನ್ನು ತಂದನು.
ಆತನು ಪಾಪ ಮತ್ತು ಮರಣವನ್ನು ಸೋಲಿಸಿದನು.

*ಈಗ* ಆತನು ನಮ್ಮನ್ನು ಕರೆಯುತ್ತಾ ಇದ್ದಾನೆ: ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಮತ್ತಾಯ 5:14

*ಆದ್ದರಿಂದ ಬನ್ನಿ ನಮ್ಮ ಹೃದಯಗಳನ್ನು ಪರೀಕ್ಷಿಸಿ ಕೊಂಡು ನಮ್ಮನ್ನು ನಾವೇ ಕೇಳಿ ಕೊಳ್ಳೋಣ :*
ಯಾವ ಕತ್ತಲೆಯಲ್ಲಿ ಬೆಳಗಲು ದೇವರು ನನ್ನನ್ನು ಕರೆಯುತ್ತಿದ್ದಾನೆ?
ನಾನು ಇನ್ನೂ ಬೆಳಕಿನ ಮೂಲಕ್ಕೆ ಸಂಪರ್ಕದಲ್ಲಿ ಇದ್ದೇನಾ?
ನನ್ನ ಜೀವನದಲ್ಲಿ ಬೆಳಕಿನಿಂದ ಬೇರ್ಪಡಿಸಬೇಕಾದ ಏನಾದರೂ ಇದೆಯೇ?
ಕಷ್ಟಕರವಾದ ಋತುವಿನಲ್ಲಿ ಕೂಡ ನಾನು ಬೆಳಗುವುದಕ್ಕೆ ಸಿದ್ಧನಾಗಿದ್ದೇನಾ?
ನನ್ನ ಜೀವಿತದ ಮೂಲಕವಾಗಿ ಕರ್ತನಾದ ಯೇಸುಕ್ರಿಸ್ತನನ್ನು ಜನರು ನೋಡಬಹುದಾ?

*ಈ ಹೊತ್ತು ತೀರ್ಮಾನಗಳನ್ನು ಮಾಡೋಣ :*
ನಾನು ಬೆಳಗುತ್ತೇನೆ.
ನಾನು ಕರ್ತನಾದ ಯೇಸುಕ್ರಿಸ್ತನಿಗೆ ಸಂಪರ್ಕದಲ್ಲಿ ಇರುತ್ತೇನೆ.
ನಾನು ಬೆಳಕಿನಲ್ಲಿ ನಡೆಯುತ್ತೇನೆ.
ಕತ್ತಲೆಯ ಕೃತ್ಯಗಳನ್ನು ನಾನು ಬದಿಗಿಡುತ್ತೇನೆ.
ನಾನು ಬೆಳಕಿನ ಕವಚವನ್ನು ಧರಿಸಿ ಕೊಳ್ಳುತ್ತೇನೆ.
ನಾನು ಕರ್ತನಾದ ಯೇಸುಕ್ರಿಸ್ತನ ಬೆಳಕನ್ನು ನನ್ನ ಕುಟುಂಬ, ಸಭೆ, ಕೆಲಸದ ಸ್ಥಳ ಮತ್ತು ನನ್ನ ಸಮುದಾಯಕ್ಕೆ ತೆಗೆದುಕೊಂಡು ಹೋಗುತ್ತೇನೆ.

ಯಾಕೆಂದರೆ ಕತ್ತಲೆಯು ಬೆಳಕನ್ನು ಜಯಿಸುವುದಿಲ್ಲ!

ಕರ್ತನಾದ ಯೇಸುಕ್ರಿಸ್ತನು ನನ್ನಲ್ಲಿ ಜೀವಿಸುವಾಗ, ನಾವು ಬೆಳಗುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ.

ಏಳು, ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. - ಯೆಶಾಯ 60:1.

ನಮ್ಮ ಪ್ರತಿಯೊಬ್ಬರ ಮೂಲಕವಾಗಿ ಕರ್ತನಾದ ಯೇಸುಕ್ರಿಸ್ತನ ಬೆಳಕು ಪ್ರಕಾಶವಾಗಿ ಬೆಳಗಲಿ. ನಿರೀಕ್ಷೆಯಿಲ್ಲದೆ ಇರುವಲ್ಲಿ ನಿರೀಕ್ಷೆಯನ್ನು ತರುವುದು. ಕುಗ್ಗಿ ಹೋದವರನ್ನು ಸ್ವಸ್ಥ ಮಾಡುವುದು, ಕಳೆದು ಹೋದವರಿಗೆ ಮಾರ್ಗದರ್ಶನ ಮತ್ತು ಆತನ ನಾಮಕ್ಕೆ ಮಹಿಮೆಯುಂಟಾಗಲಿ.

ಆಮೇನ್!

*************

## 57ನೇ ವರ್ಷದ ವಾರ್ಷಿಕ ಆಚರಣೆ - ವಿಶೇಷ ಅತಿಥಿಗಳು





ಸಹೋದರಿ, ಪದ್ಮ ಮೂದಲಿಯಾರ್, ಸಹೋದರಿ.ಜೆ.ಬಿ.ಕುಮಾರಿ ಢೇವಿಡ್ ಮತ್ತು ಶಿಬಾ (ಹಾಡುಗಾರ್ತಿ) ಈ ದಿನಗಳಲ್ಲಿ ಇವರುಗಳು ನಮ್ಮ ವಿಶೇಷ ಅತಿಥಿಗಳು.

ಈ ಆರಾಧನೆಗಳಿಗೆ ಭಾಗವಹಿಸಿದವರು ತಮ್ಮ ನಂಬಿಕೆಯನ್ನು ಬಲಪಡಿಸಿಕೊಂಡು ಮತ್ತು ಸುಧಾರಿಸಲು ದೇವರು ಅವರಲ್ಲಿ ಪ್ರತಿಯೊಬ್ಬರನ್ನು ಪ್ರಬಲವಾಗಿ ಬಳಸಿದನು. ಹಾಗೆಯೇ ನಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಕಾರ್ಯಕ್ರಮ ಗಳನ್ನು ವೀಕ್ಷಿಸಿದರು. ಆತನ ಕರೆಯು ಪ್ರತಿಧ್ವನಿ.

ಅವರನ್ನು ಆಶೀರ್ವಾದ ಮತ್ತು ಪ್ರೋತ್ಸಾಹದ ಸಾಧನಗಳಾಗಿ ಬಳಸಿದ್ದಕ್ಕಾಗಿ ನಾವು ದೇವರನ್ನು ಸ್ತುತಿಸುತ್ತೇವೆ.

## WANTED

We are looking for dedicated and responsible individuals to join our ministry team.



**1. Office Staff & Leaders**

Applicants should be computer literate and have a good command of English.



**2. Car Drivers**

Responsible and experienced drivers are required.



**3. Security Staff**

Reliable and responsible individuals are required for security duties.

***Interested candidates may send their bio-data to:***

WhatsApp: +91 98412 71858

Email: sam@echoofhiscall.org

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

## OUR QR CODE:

ECHO OF HIS CALL

Scan to pay with any UPI app

**Google Pay: 98410 71858**
**PayPal : SAM SELVA RAJ**
*****
**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

**Annual Subscription : Rs. 100/-** **Life Subscription : Rs. 2000/-**

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

RNI NO. 70107/98
Postal Regn. No. TN/CH/(C)/195/24-26
WPP NO. TN/PMG(CCR)/WPP- 219/24-26
Date of Publication: Second week of every month
Date of Posting : 9th & 10th of every month
Posted at "Egmore RMS Patrika Channel"
on 10th OCTOBER 2026.

If un-delivered please return to:

**ECHO OF HIS CALL (KANNADA)**
P.O. Box No. 2957,
Chepauk, Chennai - 600 005, INDIA.
Phone: (+ 91- 44) 2852 8282, 2852 9293, 2854 7766

## *JESUS LOVES YOU!*

To

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**